# KARNATAK UNIVERSITY, DHARWAD

No. KU-Syndicate/ Proceedings-26/2022-23/ A-69 Date: 25 SEP 2022

**"CONFIDENTIAL"**

The Syndicate meeting was held on **23rd of September, 2022 at 11.30 am** in the Syndicate Hall, Administrative Building, Karnatak University, Dharwad and the proceedings of the Syndicate meeting are as follows:

**The following members were present**

| | | |
|---|---|---|
| 1. | Prof. K.B. Gudasi, Vice-Chancellor K.U.Dharwad | Chairman |
| 2. | Dr. R. R. Madankar, Dean | Member |
| 3. | Smt. Hamsaveni N., Dharwad | Member |
| 4. | Dr. K.D. Haveripeth, Salakinakoppa, Dharwad | Member |
| 5. | Dr.(Smt). Kamala D. Dhawale, Dharwad | Member |
| 6. | Sri. R.B. Godi, Kundagol | Member |
| 7. | Dr. (Smt). Vijayalaxmi M. Nayak, Honnavar | Member |
| 8. | Sri Jayaprakash S. Badami, Navalgund | Member |
| 9. | Sri. Prakash Rayakar, Hubballi | Member |
| 10. | Smt. Sneha Joshi, Bangalore | Member |
| 11. | Dr. Shantanagouda C. Jakkanagoudar, Shiggaon | Member |
| 12. | Sri. Sudhindra Deshpande, Dharwad | Member |
| 13. | Dr.(Smt). A.N. Tamragundi, I/c Finance Officer, K.U. Dharwad | Special Invitee |
| 14. | Dr. C. Krishnamurthy Registrar (Evaluation), K.U. Dharwad | Member Secretary |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 14 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ಬೆಳಿಗ್ಗೆ 11:30 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಸಿಂಡಿಕೇಟ ಸದಸ್ಯರಾಗಿ ನೇಮಕಗೊಂಡ ಡಾ. ಆರ್.ಆರ್.ಮದನಕರ, ಪ್ರಾಧ್ಯಾಪಕರು & ಡೀನರು, ಶಿಕ್ಷಣ ನಿಖಾಯ ಇವರನ್ನು ಪರಿಚಯಿಸಿ, ಸ್ವಾಗತಿಸಿದರು. ಶ್ರೀ. ಯಶಪಾಲ ಕ್ಷೀರಸಾಗರ, ಕುಲಸಚಿವರು (ಆಡಳಿತ) ಇವರ ಅನುಪಸ್ಥಿತಿಯಲ್ಲಿ ಡಾ. ಸಿ. ಕೃಷ್ಣಮೂರ್ತಿ, ಕುಲಸಚಿವರು (ಮೌಲ್ಯಮಾಪನ) ಇವರು ಸದಸ್ಯ ಕಾರ್ಯದರ್ಶಿಯಾಗಿ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಮೊದಲನೆಯದಾಗಿ ಶ್ರೀ. ಸುಧೀಂದ್ರ ದೇಶಪಾಂಡೆ ಇವರು ವಿಶ್ವವಿದ್ಯಾಲಯದಲ್ಲಿ ಅತಿಥಿ ಹಾಗೂ ಸಹಾಯಕ ಉಪನ್ಯಾಸಕರುಗಳ ನೇಮಕಾತಿಗಾಗಿ ಸರಿಯಾದ ನಿಯಮಾವಳಿಗು ಇರುವುದಿಲ್ಲ, ಅವರುಗಳ ಗರಿಷ್ಠ ಸೇವಾ ವಯಸ್ಸುಗಳನ್ನು ಎಲ್ಲಿಯು ನಿಗಧಿಪಡಿಸಿರುವುದಿಲ್ಲ, 60ಕ್ಕೂ ಹೆಚ್ಚಿನ ವಯಸ್ಸಿನ ಸಿಬ್ಬಂದಿಗಳು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು ತಿಳಿದುಬಂದಿದೆ. ಅಲ್ಲದೇ ವಿಶ್ವವಿದ್ಯಾಲಯದಲ್ಲಿ ಅನೇಕ ಉಪನ್ಯಾಸಕರುಗಳ ಸೇವೆಯನ್ನು ಪಡೆಯುತ್ತಿದ್ದರು ಅವರ ಬಗ್ಗೆ ಸಂಪೂರ್ಣವಾದ ಮಾಹಿತಿಯು ಲಭ್ಯವಿರುವುದಿಲ್ಲವೆಂದು ತಿಳಿಸಿದರು. ಈ ವಿಷಯವಾಗಿ ಮಾನ್ಯ ಕುಲಪತಿಗಳು ಹಾಗೂ ಹಣಕಾಸು ಅಧಿಕಾರಿಯವರು ವಿಶ್ವವಿದ್ಯಾಲಯವು ಯುಜಿಸಿ ಹಾಗೂ ಸಂಬಂಧಪಟ್ಟ ನಿಯಮಗಳನ್ನು ಪಾಲಿಸುತ್ತಿದ್ದು, ಅತಿಥಿ ಹಾಗೂ ಸಹಾಯಕ ಉಪನ್ಯಾಸಕರುಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲು ತಯಾರಿ ಮಾಡಲಾಗುತ್ತಿದ್ದು, ಕಟ್ಟುನಿಟ್ಟಾಗಿ ನಿಯಮಾವಳಿಗಳನ್ನು ಪಾಲಿಸಲಾಗುವುದೆಂದು ಸದಸ್ಯರುಗಳ ಗಮನಕ್ಕೆ ತರಲಾಯಿತು.

ಕುಲಸಚಿವರು 23/9/22 ಕುಲಪತಿಗಳು

ದಿನಾಂಕ 20.08.2022ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. ಅದಕ್ಕೆ ಸದಸ್ಯರೆಲ್ಲರು ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

ದಿನಾಂಕ 02.09.2022ರ ಸಾಧಾರಣ ಸಿಂಡಿಕೇಟ ಸಭೆಯ ನಡಾವಳಿಗಳ ನಿರ್ಣಯ ಸಂಖ್ಯೆ 2ನ್ನು ಈ ಕೆಳಗಿನಂತೆ ತಿದ್ದುಪಡೆ ಮಾಡಲಾಯಿತು ಹಾಗೂ ಉಳಿದ ನಿರ್ಣಯಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

<table>
<tr><th>ನಿರ್ಣಯ ಸಂಖ್ಯೆ</th><th>ದಾಖಲಾದ ನಿರ್ಣಯ</th><th>ತಿದ್ದುಪಡೆಯಾದ ನಿರ್ಣಯ</th></tr>
<tr>
<td>02</td>
<td>
ಮುಷ್ಕರ ನಿರತ ಅತಿಥಿ ಉಪನ್ಯಾಸಕರು ಹಾಗೂ ಸಹಾಯಕ ಉಪನ್ಯಾಸಕರುಗಳು ವಿಶ್ವವಿದ್ಯಾಲಯದಲ್ಲಿ ಸಧ್ಯ ನೀಡುತ್ತಿರುವ ರೂ.24,000/- ರಿಂದ ರೂ.30,000/- ರವರೆಗೆ ಗೌರವಧನ ಅತ್ಯಂತ ಕಡಿಮೆಯಾಗಿದ್ದು ಅದನ್ನು ಹೆಚ್ಚಿಸುವಂತೆ 23 ದಿನಗಳಿಂದ (ದಿನಾಂಕ. 11.08.2022 ರಿಂದ) ಮುಷ್ಕರ ಮಾಡುತ್ತಿದ್ದು ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಹಾಗೂ ಶ್ರೀ ಎಸ್. ವಿ. ಸಂಕನೂರು, ಮಾನ್ಯ ಶಾಸಕರು, ವಿಧಾನ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ಸಂಧಾನಕ್ಕಾಗಿ ಚರ್ಚಿಸಲಾಗಿ, ಉಪನ್ಯಾಸಕರುಗಳು ಮುಷ್ಕರ ಕೈ ಬಿಡಲು ರೂ.50,000/- ಪ್ರತಿ ತಿಂಗಳು ಗೌರವಧನ ನೀಡಲು ಬೇಡಿಕೆ ಇಟ್ಟಿರುವುದನ್ನು ಸಿಂಡಿಕೇಟ್ ಸುಧೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಷರತ್ತುಗಳಿಗೆ ಒಳಪಟ್ಟು ಗೌರವಧನ ಹೆಚ್ಚಿಸುವ ಕ್ರಮ ಜರುಗಿಸಲಾಗುವುದೆಂದು ತೀರ್ಮಾನಿಸಲಾಯಿತು:
<table>
<tr><th rowspan="2">• ಸಹಾಯಕ ಉಪನ್ಯಾಸಕರು</th><th colspan="2">ಸಧ್ಯ ನೀಡುತ್ತಿರುವ ಗೌರವ ಧನ</th><th colspan="2">ಪರಿಷ್ಕರಿಸಲು ಪ್ರಸ್ತಾಪಿಸಿದ ಗೌರವ ಧನ</th></tr>
<tr><th>ಯುಜಿಸಿ</th><th>ನಾನ್-ಯುಜಿಸಿ</th><th>ಯುಜಿಸಿ</th><th>ನಾನ್-ಯುಜಿಸಿ</th></tr>
<tr><td>ಪ್ರೊಫೆಷನಲ್</td><td>ರೂ.30,000/-</td><td>ರೂ.26,000/-</td><td rowspan="2">ರೂ.40,000/-</td><td rowspan="2">ರೂ.35,000/-</td></tr>
<tr><td>ನಾನ್ ಪ್ರೊಫೆಷನಲ್</td><td>ರೂ.28,000/-</td><td>ರೂ.24,000/-</td></tr>
<tr><td>• ಅತಿಥಿ ಉಪನ್ಯಾಸಕರು</td><td>ರೂ.18,000/-</td><td>ರೂ.16,000/-</td><td>ರೂ.26,000/-</td><td>ರೂ.22,000/-</td></tr>
</table>
1) ಯುಜಿಸಿ ನಿಯಮಾವಳಿಗಳ ಅನುಸಾರ ಸಹಾಯಕ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಯುಜಿಸಿ ಮತ್ತು ನಾನ್ ಯುಜಿಸಿ ಅರ್ಹತೆಯ ಅನುಸಾರ ಪ್ರಸ್ತುತ ಇರುವ ರೋಸ್ಟರ ಅಂಶಗಳನ್ನು ಪರಿಶೀಲಿಸಿ ಅವಶ್ಯವೆನಿಸಿದರೆ ರೋಸ್ಟರ ಅನುಗುಣವಾಗಿ ಸಂದರ್ಶನದ ಮೂಲಕ ಸೇವೆಯನ್ನು ಪಡೆಯುವುದು.<br>
2) ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗಗಳಲ್ಲಿರುವ ಸಹಾಯಕ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಯುಜಿಸಿ ನಿಯಮಾವಳಿಗಳ ಅನುಸಾರ ಬೋಧನಾ ಕಾರ್ಯ ಹಂಚಿಕೆಯಾದ ಕಾರ್ಯಬಾರಗಳಿಗೆ ಸೇವೆಯನ್ನು ಅವಶ್ಯಕತೆಗನುಗುಣವಾಗಿ ಪಡೆಯುವುದು.<br>
3) ಪರಿಷ್ಕರಿಸಲು ಪ್ರಸ್ತಾಪಿಸಿದ ಗೌರವಧನವನ್ನು ಮಂಜೂರಾದ ಹುದ್ದೆಗಳ ವಿರುದ್ಧವಾಗಿ ಸರ್ಕಾರದಿಂದ ಹೆಚ್ಚುವರಿ ಅನುಧಾನ ಮಂಜೂರಾಗುವ ಷರತ್ತಿಗೊಳಪಟ್ಟು ಹೆಚ್ಚಿಸುವುದು.<br>
4) ಮಹಿಳಾ ಸಹಾಯಕ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಹೆರಿಗೆ ರಜೆ ಸಂಬಂಧವಾಗಿ ಮಾನ್ಯ ವಿವಿಧ ನ್ಯಾಯಾಲಯಗಳ ಹಾಗೂ ಸರ್ಕಾರದ ಪ್ರಚಲಿತ ಆದೇಶದಂತೆ ಕ್ರಮ ಜರುಗಿಸುದು.
</td>
<td>
ಮುಷ್ಕರ ನಿರತ ಅತಿಥಿ ಉಪನ್ಯಾಸಕರು, ಸಹಾಯಕ ಉಪನ್ಯಾಸಕರುಗಳು ಹಾಗೂ ಅತಿಥಿ ಸಹಾಯಕ ಗ್ರಂಥಪಾಲಕರುಗಳಿಗೆ ವಿಶ್ವವಿದ್ಯಾಲಯದಲ್ಲಿ ಸಧ್ಯ ನೀಡುತ್ತಿರುವ ರೂ.24,000/- ರಿಂದ ರೂ.30,000/- ರವರೆಗೆ ಗೌರವಧನ ಅತ್ಯಂತ ಕಡಿಮೆಯಾಗಿದ್ದು ಅದನ್ನು ಹೆಚ್ಚಿಸುವಂತೆ 23 ದಿನಗಳಿಂದ (ದಿನಾಂಕ. 11.08.2022 ರಿಂದ) ಮುಷ್ಕರ ಮಾಡುತ್ತಿದ್ದು ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಹಾಗೂ ಶ್ರೀ ಎಸ್. ವಿ. ಸಂಕನೂರು, ಮಾನ್ಯ ಶಾಸಕರು, ವಿಧಾನ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ಸಂಧಾನಕ್ಕಾಗಿ ಚರ್ಚಿಸಲಾಗಿ, ಉಪನ್ಯಾಸಕರುಗಳು ಮುಷ್ಕರ ಕೈ ಬಿಡಲು ರೂ.50,000/- ಪ್ರತಿ ತಿಂಗಳು ಗೌರವಧನ ನೀಡಲು ಬೇಡಿಕೆ ಇಟ್ಟಿರುವುದನ್ನು ಸಿಂಡಿಕೇಟ್ ಸುಧೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಷರತ್ತುಗಳಿಗೆ ಒಳಪಟ್ಟು ಗೌರವಧನ ಹೆಚ್ಚಿಸುವ ಕ್ರಮ ಜರುಗಿಸಲಾಗುವುದೆಂದು ತೀರ್ಮಾನಿಸಲಾಯಿತು:
<table>
<tr><th rowspan="2">• ಸಹಾಯಕ ಉಪನ್ಯಾಸಕರು</th><th colspan="2">ಸಧ್ಯ ನೀಡುತ್ತಿರುವ ಗೌರವ ಧನ</th><th colspan="2">ಪರಿಷ್ಕರಿಸಲು ಪ್ರಸ್ತಾಪಿಸಿದ ಗೌರವ ಧನ</th></tr>
<tr><th>ಯುಜಿಸಿ</th><th>ನಾನ್-ಯುಜಿಸಿ</th><th>ಯುಜಿಸಿ</th><th>ನಾನ್-ಯುಜಿಸಿ</th></tr>
<tr><td>ಪ್ರೊಫೆಷನಲ್</td><td>ರೂ.30,000/-</td><td>ರೂ.26,000/-</td><td rowspan="2">ರೂ.40,000/-</td><td rowspan="2">ರೂ.35,000/-</td></tr>
<tr><td>ನಾನ್ ಪ್ರೊಫೆಷನಲ್</td><td>ರೂ.28,000/-</td><td>ರೂ.24,000/-</td></tr>
<tr><td>• ಅತಿಥಿ ಉಪನ್ಯಾಸಕರು</td><td>ರೂ.18,000/-</td><td>ರೂ.16,000/-</td><td>ರೂ.26,000/-</td><td>ರೂ.22,000/-</td></tr>
<tr><td>• ಅತಿಥಿ ಸಹಾಯಕ ಗ್ರಂಥಪಾಲಕರು</td><td>ರೂ..28,000/-</td><td>ರೂ.24,000/-</td><td>ರೂ.40,000/-</td><td>ರೂ.35,000/-</td></tr>
</table>
1) ಯುಜಿಸಿ ನಿಯಮಾವಳಿಗಳ ಅನುಸಾರ ಸಹಾಯಕ ಉಪನ್ಯಾಸಕರು, ಅತಿಥಿ ಉಪನ್ಯಾಸಕರುಗಳ ಹಾಗೂ ಅತಿಥಿ ಸಹಾಯಕ ಗ್ರಂಥಪಾಲಕರುಗಳ ಸೇವೆಯನ್ನು ಯುಜಿಸಿ ಮತ್ತು ನಾನ್ ಯುಜಿಸಿ ಅರ್ಹತೆಯ ಅನುಸಾರ ಪ್ರಸ್ತುತ ಇರುವ ರೋಸ್ಟರ ಅಂಶಗಳನ್ನು ಪರಿಶೀಲಿಸಿ ಅವಶ್ಯವೆನಿಸಿದರೆ ರೋಸ್ಟರ ಅನುಗುಣವಾಗಿ ಸಂಬಂಧಪಟ್ಟ ಹುದ್ದೆಗಳಿಗೆ ಸಂದರ್ಶನದ ಮೂಲಕ ಸೇವೆಯನ್ನು ಪಡೆಯುವುದು.<br>
2) ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗಗಳಲ್ಲಿರುವ ಸಹಾಯಕ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಯುಜಿಸಿ ನಿಯಮಾವಳಿಗಳ ಅನುಸಾರ ಬೋಧನಾ ಕಾರ್ಯ ಹಂಚಿಕೆಯಾದ ಕಾರ್ಯಭಾರಗಳಿಗೆ ಸೇವೆಯನ್ನು ಅವಶ್ಯಕತೆಗನುಗುಣವಾಗಿ ಪಡೆಯುವುದು.<br>
3) ಪರಿಷ್ಕರಿಸಲು ಪ್ರಸ್ತಾಪಿಸಿದ ಗೌರವಧನವನ್ನು ಮಂಜೂರಾದ ಹುದ್ದೆಗಳ ವಿರುದ್ಧವಾಗಿ ಸರ್ಕಾರದಿಂದ ಹೆಚ್ಚುವರಿ ಅನುಧಾನ ಮಂಜೂರಾಗುವ ಷರತ್ತಿಗೊಳಪಟ್ಟು ಹೆಚ್ಚಿಸುವುದು.<br>
4) ಮಹಿಳಾ ಸಹಾಯಕ ಉಪನ್ಯಾಸಕರು, ಅತಿಥಿ ಉಪನ್ಯಾಸಕರುಗಳು ಹಾಗೂ ಅತಿಥಿ ಸಹಾಯಕ ಗ್ರಂಥಪಾಲಕರುಗಳಿಗೆ ಹೆರಿಗೆ ರಜೆ ಸಂಬಂಧವಾಗಿ ಮಾನ್ಯ ವಿವಿಧ ನ್ಯಾಯಾಲಯಗಳ ಹಾಗೂ ಸರ್ಕಾರದ ಪ್ರಚಲಿತ ಆದೇಶದಂತೆ ಕ್ರಮ ಜರುಗಿಸುವುದು.
</td>
</tr>
</table>

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–02: ವಿಷಯ–: ದಿನಾಂಕ: **14–9–2022** ರಂದು ನಡೆದ ವಿಶೇಷ ಸ್ಥಿರ ಆಸ್ತಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಪರಿಶೀಲಿಸುವುದು.

ಟಿಪ್ಪಣಿ :

ದಿನಾಂಕ 14–9–2022 ರಂದು ಮಧ್ಯಾಹ್ನ 3.00 ಘಂಟೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸಭಾ ಭವನದಲ್ಲಿ ಸ್ಥಿರಾಸ್ತಿ ಸಮಿತಿ ಸಭೆಯನ್ನು ಕರೆಯಲಾಗಿತ್ತು.

ಸದರಿ ಸಮಿತಿಯವರು ಪರಿಶೀಲಿಸಿ ಮಾಡಲಾದ ಶಿಫಾರಸ್ಸುಗಳನ್ನು ಸಿಂಡಿಕೇಟ ಸಭೆಗೆ ಒಪ್ಪಿಗೆಗಾಗಿ ಮಂಡಿಸಲಾಯಿತು.

## ನಿರ್ಣಯ

**ದಿನಾಂಕ: 14–09–2022 ರಂದು ನಡೆದ ವಿಶೇಷ ಸ್ಥಿರ ಆಸ್ತಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ–03: ವಿಷಯ–: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಗ್ರುಪ್ "ಸಿ" ಮತ್ತು ಗ್ರುಪ್ "ಡಿ" ನೌಕರರಿಗೆ ಕಾರ್ಮಿಕ ಇಲಾಖೆಯ 2021–22 ನೇ ಸಾಲಿನ ಪರಿಷ್ಕೃತ ವೇತನ ನೀಡುವ ವಿಷಯವನ್ನು ಪರಿಶೀಲಿಸುವ ಕುರಿತು.

ಟಿಪ್ಪಣಿ:–

ಶ್ರೀ. ಬಿ.ಕೆ.ಆರ್ ಸ್ವಾಮಿ ಸೆಕ್ಯೂರಿಟಿ ಏಜನ್ಸಿ, ಹರಿಹರ ಇವರು ದಿನಾಂಕ: 02.03.2022 ರಂದು ಪತ್ರ ಬರೆದು ಪತ್ರದೊಂದಿಗೆ ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ: **KAE 71 LWA 2015, dated: 05.08.2016** ರ ಸುತ್ತೋಲೆಯನ್ನು ಲಗತ್ತಿಸಿ ತಮ್ಮ ಸಂಸ್ಥೆಯ ಮುಖಾಂತರ ಸೇವೆ ಸಲ್ಲಿಸುತ್ತಿರುವ ಗ್ರುಪ್ "ಸಿ" ಮತ್ತು "ಡಿ" ವರ್ಗದ ನೌಕರರಿಗೆ ಕೂಡ ಕಾರ್ಮಿಕ ಕನಿಷ್ಠ ವೇತನ ವಿ.ಡಿ.ಎ ನ್ನು ದಿನಾಂಕ: 01.04.2021 ರಿಂದ ಅನ್ವಯವಾಗುವಂತೆ ವೇತನ ಪಾವತಿಸಲು ಕೋರಿರುವರು.

**ಸದರಿ ಸರ್ಕಾರದ** ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಟ್ಟಣ ಮತ್ತು ಗ್ರಾಮ ಪಂಚಾಯತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆ ಎಂದು ತಿಳಿಸಲಾಗಿದೆ. (**ಸುತ್ತೋಲೆ ಲಗತ್ತಿಸಲಾಗಿದೆ**)

List of scheduled employment minimum wages fixed serial no. 79 URBAN LOCAL BODIES AND TOWN AND VILLAGE PANCHAYATS ಶೆಡ್ಯೂಲ್‌ನ ದೃಢೀಕೃತ ದ್ವಿಪ್ರತಿಯನ್ನು ಲಗತ್ತಿಸಿ ಇದರಂತೆ ಹೊರಗುತ್ತಿಗೆ ನೌಕರರಿಗೆ ವೇತನ ಪಾವತಿಸಲು ತಿಳಿಸಿದ್ದು ಇರುತ್ತದೆ. ಸದರಿ ಶೆಡ್ಯೂಲ್‌ನಲ್ಲಿ ಈ ಕೆಳಗಿನಂತೆ ದರಗಳನ್ನು ನಿಗದಿಪಡಿಸಲಾಗಿದೆ.

| Sl. No | Class of Employment | | **BBMP and other City Corporations** | All City Municipalities (Grade-I) | All Municipalities Town and Village (Grade-II) | All Town Panchayats and Gram Panchayats |
|---|---|---|---|---|---|---|
| | | | Per Month | | | |
| 2 | Computer Operator Data Entry Operator and Others | Basic<br>VDA<br>Total | 13365.00<br>2121.60<br>15,486.60 | 12958.00<br>2121.60<br>15,079.60 | 12006.00<br>2121.60<br>14,727.60 | 12422.00<br>2121.60<br>14,243.60 |
| 6 | Attender Servants Watchman and others | Basic<br>VDA<br>Total | 11011.00<br>2121.60<br>13,132.60 | 10725.00<br>2121.60<br>12,846.60 | 10439.00<br>2121.60<br>12,560.60 | 10010.00<br>2121.60<br>12,131.60 |

ಸದ್ಯ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರುಪ್ "ಸಿ" 179, ಗ್ರುಪ್ "ಡಿ" 317 ಒಟ್ಟು 496 ಹೊರ ಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದು ಸದ್ಯ ಗ್ರುಪ್ "ಸಿ" ನೌಕರರಿಗೆ ಕಾರ್ಮಿಕ ಇಲಾಖೆಯ 2021–22 ನೇ ಸಾಲಿನ "ನಗರ ಸ್ಥಳೀಯ ಸಂಸ್ಥೆಗಳು" ಹಾಗೂ "ಪಂಚಾಯತ್ ರಾಜ್ ಸಂಸ್ಥೆಗಳಿಗೆ" ನಿಗದಿ ಪಡಿಸಿದ ಕನಿಷ್ಠ ವೇತನವನ್ನು ನೀಡಲಾಗುತ್ತಿದೆ.

**ಆದ್ದರಿಂದ,** List of scheduled employment minimum wages fixed serial no. 79 URBAN LOCAL BODIES AND TOWN AND VILLAGE PANCHAYATS ಶೆಡ್ಯೂಲ್‌ನಲ್ಲಿ ನಿಗದಿಪಡಿಸಲಾದ BBMP and other City Corporations column ನಲ್ಲಿ Computer Operator, Data Entry Operator and Others ("ಸಿ" ಗ್ರುಪ್ ನೌಕರರು) ಗೆ ರೂ.15,486.60, Attender, Servants, Watchman and others ("ಡಿ"

ಕುಲಸಚಿವರು

ಗ್ರೂಪ್ ನೌಕರರು) ಗೆ ರೂ.13,132.60 ವೇತನವನ್ನು ನಿಗದಿಪಡಿಸಿದ್ದು ಈ ವೇತನವನ್ನು ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರಿಗೆ ನಿಗದಿಪಡಿಸಿದಲ್ಲಿ ವಿಶ್ವವಿದ್ಯಾಲಯವು ಒಂದು ತಿಂಗಳಿಗೆ ಹಾಗೂ ಒಂದು ವರ್ಷಕ್ಕೆ ಭರಿಸಬೇಕಾದ ವೇತನದ ವಿವರವು ಈ ಕೆಳಗಿನಂತೆ ಇರುತ್ತದೆ.

| ಅ. ನಂ | ಹುದ್ದೆ | ಸಂಖ್ಯೆ | ವೇತನ | PF + ESI + GST + ಏಜೆನ್ಸಿ ಕಮೀಷನ್ ಸೇರಿ ಪಾವತಿಸಬೇಕಾದ ಒಟ್ಟು ವೇತನ ರೂ. | ಒಂದು ತಿಂಗಳಿಗೆ ರೂ. | ಒಂದು ವರ್ಷಕ್ಕೆ ರೂ. |
|---|---|---|---|---|---|---|
| 1 | "ಸಿ" | 179 | 15,486.60 | 21,881.06 | 39,16,709.74 | 4,70,00,516.88 |
| 2 | "ಡಿ" | 317 | 13,132.60 | 18,612.54 | 59,00,175.18 | 7,08,02,102.16 |
| ಒಟ್ಟು | | 496 | --- | ಒಟ್ಟು ರೂ. | 98,16,884.92 | 11,78,02,619.04 |

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಗ್ರೂಪ್ "ಸಿ" ಮತ್ತು ಗ್ರೂಪ್ "ಡಿ" ನೌಕರರಿಗೆ ಕಾರ್ಮಿಕ ಇಲಾಖೆಯ 2021-22 ನೇ ಸಾಲಿನ ಪರಿಷ್ಕೃತ ವೇತನ ಪಾವತಿಸುವ ಕುರಿತಾದ ವಿಷಯವನ್ನು ಹಣಕಾಸು ಸಮಿತಿಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ದಿನಾಂಕ: 06.04.2022 ರಂದು ಜರುಗಿದ ಹಣಕಾಸು ಸಮಿತಿಯು ತನ್ನ ನಿರ್ಣಯ ಸಂಖ್ಯೆ: 5 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

**ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಗ್ರೂಪ್ "ಸಿ" ಮತ್ತು ಗ್ರೂಪ್ "ಡಿ" ನೌಕರರಿಗೆ ಕಾರ್ಮಿಕ ಇಲಾಖೆಯ 2021-22 ನೇ ಸಾಲಿನ ಪರಿಷ್ಕೃತ ವೇತನ ಪಾವತಿಸುವ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿ ಕರ್ನಾಟಕ ರಾಜ್ಯದಲ್ಲಿರುವ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ (ಗುಲ್ಬರ್ಗಾ, ರಾಣಿ ಚೆನ್ನಮ್ಮ ಮತ್ತು ಇತರೆ) ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಸಿಬ್ಬಂದಿಗಳಿಗೆ ನೀಡುವ ವೇತನದ ಮಾಹಿತಿ ಪಡೆದು ತುಲನಾತ್ಮಕ ಸ್ಟೇಟಮೆಂಟ್ ತಯಾರಿಸಿ ಮಾನ್ಯ ಕುಲಪತಿಗಳ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿ, ಕುಲಪತಿಗಳ ಆದೇಶದ ದಿನಾಂಕದಿಂದ ಅನ್ವಯವಾಗುವಂತೆ ಪರಿಷ್ಕೃತ ವೇತನವನ್ನು ಪಾವತಿಸಲು ಕ್ರಮವಹಿಸಬೇಕೆಂದು ಸಭೆಯು ಒಪ್ಪಿಗೆಯನ್ನು ಸೂಚಿಸಿತು.**

ಹಣಕಾಸು ಸಮಿತಿಯ ನಿರ್ಣಯದನುಸಾರ ಕರ್ನಾಟಕ ರಾಜ್ಯದಲ್ಲಿರುವ ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಗಳಿಗೆ ಕಛೇರಿ ಪತ್ರ ಸಂಖ್ಯೆ: ಕೆಯು/ಜಿಎಡಿ/2022-23/78, ದಿನಾಂಕ: 16.05.2022 ರ ಮೇರೆಗೆ ಹೊರಗುತ್ತಿಗೆ ನೌಕರರ ಪಾವತಿಸಿದ ವೇತನದ ಮಾಹಿತಿಯನ್ನು ಪಡೆಯಲು ಪತ್ರಗಳನ್ನು ಬರೆಯಲಾಗಿದ್ದು, ಅದರಂತೆ ಕೇವಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಮಾತ್ರ ನಮ್ಮ ವಿಭಾಗಕ್ಕೆ ಮಾಹಿತಿ ಬಂದಿದ್ದು ಸದರಿಯವರು ಕಾರ್ಮಿಕ ಇಲಾಖೆಯು ನೀಡುವ ವೇತನವನ್ನು ಹೊರಗುತ್ತಿಗೆ ನೌಕರರಿಗೆ ಬಟವಡೆ ಮಾಡುತ್ತಿರುವುದಾಗಿ ತಮ್ಮ ಪತ್ರದಲ್ಲಿ ತಿಳಿಸಿದ್ದು ಇರುತ್ತದೆ ಹಾಗೂ ಕೇವಲ ಒಂದು ವಿಶ್ವವಿದ್ಯಾಲಯದ ಮಾಹಿತಿ ಬಂದಿದ್ದಾಗಿ ತುಲನಾತ್ಮಕ ಸ್ಟೇಟಮೆಂಟ್ ತಯಾರಿಸಲಾಗಿರುವುದಿಲ್ಲ. ಕೆಲವೊಂದು ವಿಶ್ವವಿದ್ಯಾಲಯಗಳು ಹೊಸದಾಗಿ ಪ್ರಾರಂಭಿಸಿರುವುದರಿಂದ 50 ಕ್ಕಿಂತ ಕಡಿಮೆ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಅವರಿಗೆ ಸಂಚಿತ ವೇತನವನ್ನು ನೀಡಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ಪರಿಚ್ಛೇದ 51 ರ ಮಾನ್ಯ ಕುಲಪತಿಗಳ ಆದೇಶ ದಿನಾಂಕ: 15.09.2022 ರ ಅನುಸಾರ ಸದರ ವಿಷಯವನ್ನು ಸಿಂಡಿಕೇಟ ಸಭೆಯಲ್ಲಿ ಮಂಡಿಸಲು ಆದೇಶಿಸಿದ್ದು, ಅದರಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಏಜನ್ಸಿಯ ಮೂಲಕ ಕಾರ್ಯ ನಿರ್ವಹಿಸುತ್ತಿರುವ "ಸಿ" ಮತ್ತು "ಡಿ" ಗ್ರೂಪ್ ನೌಕರರಿಗೆ 2021-22 ನೇ ಸಾಲಿನ ಕಾರ್ಮಿಕ ಇಲಾಖೆಯ ಪರಿಷ್ಕೃತ ವೇತನವನ್ನು ನೀಡುವ ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಗ್ರೂಪ್ "ಸಿ" ಮತ್ತು ಗ್ರೂಪ್ "ಡಿ" ನೌಕರರಿಗೆ ಕಾರ್ಮಿಕ ಇಲಾಖೆಯ 2021-22 ನೇ ಸಾಲಿನ ಪರಿಷ್ಕೃತ ವೇತನವನ್ನು ಹಣಕಾಸು ಸಮಿತಿ ನಿರ್ಣಯಿಸಿದಂತೆ ಕುಲಪತಿಗಳ ಆದೇಶದ ದಿನಾಂಕದಿಂದ ಅನ್ವಯವಾಗುವಂತೆ ಪಾವತಿಸಲು ಸಿಂಡಿಕೇಟ ಸಭೆಯು ಅನುಮೋದಿಸಿತು.**

ಕುಲಸಚಿವರು      ಕುಲಪತಿಗಳು

**ಕಲಂ ಸಂಖ್ಯೆ-04: ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳ (Botany) ವಿಷಯದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ 1) Prof. J. S. Kulkarni 2) Prof. Dr. M. G. Panchaksharappa ಮತ್ತು 3) Prof. Dr. M.S. Chennaveeraiah ಇವರುಗಳ ಹೆಸರಿನಲ್ಲಿ ನಗದು ಪಾರಿತೋಷಕಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ:**

01. ಶ್ರೀ ಶ್ಯಾಮ ಸುಂದರ ಜೋಶಿ, 23, ಆರ್.ಬಿ.ಆಯ್ ಕಾಲೋನಿ, ಆನಂದ ನಗರ, ಬೆಂಗಳೂರು-560024 ಇವರು ದಿನಾಂಕ: 20-02-2022ರ ತಮ್ಮ ಪತ್ರದಲ್ಲಿ ಈ ಕೆಳಗಿನ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ನಗದು ಪಾರಿತೋಷಕ ಸ್ಥಾಪನೆ ಮಾಡುವಂತೆ ಇಚ್ಛಿಸಿ ಹಣಕಾಸು ಅಧಿಕಾರಿಗಳು ಕ.ವಿ.ವಿ ಧಾರವಾಡ ಇವರ ಹೆಸರಿನಲ್ಲಿ ದತ್ತಿ ಮೊತ್ತವನ್ನು ಚೆಕ್‌ಗಳ ಮುಖಾಂತರ ಸಲ್ಲಿಸಿರುವರು.

| ಅ.ನಂ. | ನಗದು ಪಾರಿತೋಷಕದ ಹೆಸರು | ಪದವಿ | ಚೆಕ್ ನಂ. ಮತ್ತು ದಿನಾಂಕ | ಪಾವತಿಸಿದ ದತ್ತಿ ಮೊತ್ತ |
|---|---|---|---|---|
| 01 | **Prof. J. S. Kulkarni SIMAROUBA cash prize** | **B.Sc. Botany (K.S.C.D)** | **273882 09.03.2022** | **Rs. 60,000/-** |
| 02 | **Prof Dr. M. G. Panchaksharappa SIMAROUBA cash prize** | **M.Sc. Botany (Male Student)** | **273881 09.03.2022** | **Rs.1,00,000/-** |
| 03 | **Prof. Dr. M.S. Chennaveeraiah SIMAROUBA cash prize** | **M.Sc. Botany (Female Student)** | **273880 09.03.2022** | **Rs.1,00,000/-** |
| | | | **Total=** | **Rs 2,60,000/-** |

02. ಸದರಿ ವಿಷಯದ ಕುರಿತು ಸಿಂಡಿಕೇಟ ಸಭೆ ಕಲಂ ನಂ-28 ದಿನಾಂಕ:07-09-2007 ರ ನಿರ್ಣಯದಂತೆ ನಗದು ಪಾರಿತೋಷಕ ಸ್ಥಾಪಿಸಲು ಕನಿಷ್ಟ ರೂಪಾಯಿ.35,000/-(ರೂಪಾಯಿ ಮುವತ್ತೈದು ಸಾವಿರ ಮಾತ್ರ) ದತ್ತಿ ಮೊತ್ತ ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಈ ಮೇಲಿನಂತೆ ದತ್ತಿ ಮೊತ್ತವನ್ನು ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ನಗದು ಪಾರಿತೋಷಕವನ್ನು ಪಾವತಿಸಲಾಗುವುದು.

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12-12-2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ-13 ರಲ್ಲಿನ ನಿರ್ದೇಶನದಂತೆ ದಾನಿಗಳು 1) Prof. J. S. Kulkarni 2) Prof Dr. M. G. Panchaksharappa ಮತ್ತು 3) Prof. Dr. M.S. Chennaveeraiah ಇವರುಗಳ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

ಕುಲಸಚಿವರು

04. ದಿನಾಂಕ 13-08-2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-13 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

*"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳ* **(Botany)** *ವಿಷಯದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ 1)* ***Prof. J. S. Kulkarni 2) Prof. Dr. M. G. Panchaksharappa*** *ಮತ್ತು* ***3) Prof. Dr. M.S. Chennaveeraiah*** *ಇವರುಗಳ ಹೆಸರಿನಲ್ಲಿ ನಗದು ಪಾರಿತೋಷಕಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."*

05. ಕಾರಣ ಈ ಕೆಳಗಿನಂತೆ ನಗದು ಪಾರಿತೋಷಕಗಳನ್ನು ಸ್ಥಾಪಿಸಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

| ಅ.ನಂ. | ನಗದು ಪಾರಿತೋಷಕದ ಹೆಸರು | ಸ್ನಾತಕ/ಸ್ನಾತಕೋತ್ತರ ಪದವಿ |
|---|---|---|
| **01** | **Prof. J. S. Kulkarni SIMAROUBA cash prize** | **B.Sc. Botany, (K.S.C.D)** |
| **02** | **Prof Dr. M. G. Panchaksharappa SIMAROUBA cash prize** | **M.Sc. Botany, (Male Student)** |
| **03** | **Prof. Dr. M.S. Chennaveeraiah SIMAROUBA cash prize** | **M.Sc.Botany,(Female Student)** |

<u>ನಿರ್ಣಯ</u>

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳ (Botany) ವಿಷಯದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ 1) Prof. J. S. Kulkarni 2) Prof. Dr. M. G. Panchaksharappa ಮತ್ತು 3) Prof. Dr. M.S. Chennaveeraiah ಇವರುಗಳ ಹೆಸರಿನಲ್ಲಿ ನಗದು ಪಾರಿತೋಷಕಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.

ಕುಲಪತಿಗಳು

ಕಲಂ ಸಂಖ್ಯೆ–05: ವಿಷಯ–: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ (M.Sc) ಪದವಿಗಳ (Zoology, Geology & Chemistry) ವಿಷಯಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ 1) Prof. Dr. S.M. Jorapur 2) Prof. Dr. S.G. Bharati ಮತ್ತು 3) Prof. A. Suryanarayana ಇವರುಗಳ ಹೆಸರಿನಲ್ಲಿ ನಗದು ಪಾರಿತೋಷಕಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ:

01. ಶ್ರೀ ಶ್ಯಾಮ ಸುಂದರ ಜೋಶಿ, 23, ಆರ್.ಬಿ.ಆಯ್ ಕಾಲೋನಿ, ಆನಂದ ನಗರ, ಬೆಂಗಳೂರು–560024 ಇವರು ದಿನಾಂಕ: 16–03–2022ರ ತಮ್ಮ ಪತ್ರದಲ್ಲಿ ಈ ಕೆಳಗಿನ ಪದವಿಗಳಿಗೆ ನಗದು ಪಾರಿತೋಷಕ ಸ್ಥಾಪನೆ ಮಾಡುವಂತೆ ಇಚ್ಛಿಸಿ ಹಣಕಾಸು ಅಧಿಕಾರಿಗಳು ಕ.ವಿ.ವಿ ಧಾರವಾಡ ಇವರ ಹೆಸರಿನಲ್ಲಿ ದತ್ತಿ ಮೊತ್ತವನ್ನು ಚೆಕ್ ಮುಖಾಂತರ ಸಲ್ಲಿಸಿರುವರು.

| ಅ.ನಂ. | ನಗದು ಪಾರಿತೋಷಕದ ಹೆಸರು | ಪದವಿ | ಚೆಕ್ ನಂ. ದಿನಾಂಕ | ಪಾವತಿಸಿದ ದತ್ತಿ ಮೊತ್ತ |
|---|---|---|---|---|
| 01 | Prof. Dr. S.M. Jorapur SIMAROUBA cash prize | M.Sc. Zoology | 273883 22.03.2022 | Rs.1,00,000/- |
| 02 | Prof. Dr. S.G. Bharati SIMAROUBA cash prize | M.Sc. Geology | 273884 22.02.2022 | Rs.1,00,000/- |
| 03 | Prof. A. Suryanarayana SIMAROUBA cash prize | M.Sc. Chemistry | 273885 22.03.2022 | Rs.1,00,000/- |
| | | | Total= | Rs-3,00,000/- |

02. ಸದರಿ ವಿಷಯದ ಕುರಿತು ಸಿಂಡಿಕೇಟ ಸಭೆ ಕಲಂ ನಂ–28 ದಿನಾಂಕ:07–09–2007 ರ ನಿರ್ಣಯದಂತೆ ನಗದು ಪಾರಿತೋಷಕ ಸ್ಥಾಪಿಸಲು ಕನಿಷ್ಠ ರೂಪಾಯಿ.35,000/–(ರೂಪಾಯಿ ಮೂವತ್ತೈದು ಸಾವಿರ ಮಾತ್ರ) ದತ್ತಿ ಮೊತ್ತ ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಈ ಮೇಲಿನಂತೆ ದತ್ತಿ ಮೊತ್ತವನ್ನು ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ನಗದು ಪಾರಿತೋಷಕಗಳನ್ನು ಪಾವತಿಸಲಾಗುವುದು.

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ ದಾನಿಗಳು 1) Prof. Dr. S.M. Jorapur 2) Prof. Dr. S.G. Bharati ಮತ್ತು 3) Prof. A. Suryanarayana ಇವರುಗಳ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

ಕುಲಸಚಿವರು

04. ದಿನಾಂಕ 13-08-2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-12 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

*"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ (M.Sc) ಪದವಿಗಳ (Zoology, Geology & Chemistry) ವಿಷಯಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ 1) Prof. Dr. S.M. Jorapur 2) Prof. Dr. S.G. Bharati ಮತ್ತು 3) Prof. A. Suryanarayana ಇವರುಗಳ ಹೆಸರಿನಲ್ಲಿ ನಗದು ಪಾರಿತೋಷಕಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."*

05. ಕಾರಣ ಈ ಕೆಳಗಿನಂತೆ ನಗದು ಪಾರಿತೋಷಕಗಳನ್ನು ಸ್ಥಾಪಿಸಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

| ಅ.ನಂ. | ನಗದು ಪಾರಿತೋಷಕದ ಹೆಸರು | ಸ್ನಾತಕೋತ್ತರ ಪದವಿ |
|---|---|---|
| 01 | Prof. Dr. S.M. Jorapur SIMAROUBA cash prize | M.Sc. Zoology |
| 02 | Prof. Dr. S.G. Bharati SIMAROUBA cash prize | M.Sc. Geology |
| 03 | Prof. A. Suryanarayana SIMAROUBA cash prize | M.Sc. Chemistry |

## ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ (M.Sc) ಪದವಿಗಳ ವಿಷಯಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ 1) Prof. Dr. S.M. Jorapur (M.Sc. Zoology) 2) Prof. Dr. S.G. Bharati (M.Sc. Geology) ಮತ್ತು 3) Prof. A. Suryanarayana (M.Sc. Chemistry) ಇವರುಗಳ ಹೆಸರಿನಲ್ಲಿ ನಗದು ಪಾರಿತೋಷಕಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.

ಕುಲಸಚಿವರು　　　　ಕುಲಪತಿಗಳು

ಕಲಂ ಸಂಖ್ಯೆ-06: ವಿಷಯ-: ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಸ್ನಾತಕ **B.Sc** ಪದವಿಯ **(Physics)** ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Late Prof. S.S. Suligavi"** ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ:

1. ಶ್ರೀ ಬಸವರಾಜ ಸುಳಿಗಾವಿ, ಶ್ರೀ-ನಂದಿ ನಿವಾಸ, ಭಾರತಿ ನಗರ, ಧಾರವಾಡ ಇವರು ದಿನಾಂಕ:30.03.2022 ರ ತಮ್ಮ ಪತ್ರದಲ್ಲಿ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ B.Sc ಪದವಿಯ (Physics) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Late Prof. S.S. Suligavi"** ಇವರ ಹೆಸರಿನಲ್ಲಿ ಪ್ರತಿವರ್ಷ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.
2. ಸದರಿ ವಿಷಯದ ಕುರಿತು ದಿನಾಂಕ:02-11-2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ.1,00,000/-(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್(ಚೆಕ್-ನಂ 648103 ದಿನಾಂಕ:30.03.2022) ಮೂಲಕ **ರೂ.1,10,000/-**(ರೂಪಾಯಿ ಒಂದು ಲಕ್ಷ ಹತ್ತು ಸಾವಿರ ಮಾತ್ರ) ಗಳನ್ನು ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು. **ದಾನಿಗಳು 2021-22 ನೇ ಸಾಲಿನಲ್ಲಿ ಜರುಗುವ 72 ನೇ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣ ಪದಕ ಪ್ರದಾನ ಮಾಡಲು ಹೆಚ್ಚುವರಿಯಾಗಿ ರೂ.10.000/- ಗಳನ್ನು ಪಾವತಿಸಿದ್ದಾರೆ.**
3. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12-12-2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ-13 ರಲ್ಲಿನ ನಿರ್ದೇಶನದಂತೆ Late Prof. S.S. Suligavi ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.
4. ದಿನಾಂಕ 13-08-2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-09 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

   ***"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ B.Sc ಪದವಿಯ (Physics) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Late Prof. S.S. Suligavi" ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***
5. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಸ್ನಾತಕ B.Sc.(Physics) ಪದವಿಯ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Late Prof. S.S. Suligavi" ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-07: ವಿಷಯ-: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ M.Sc ಪದವಿಯ (Physics) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Late Prof. S.S. Suligavi"** ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ:

1. ಶ್ರೀ ಬಸವರಾಜ ಸುಳಿಗಾವಿ, ಶ್ರೀ-ನಂದಿ ನಿವಾಸ, ಭಾರತಿ ನಗರ, ಧಾರವಾಡ ಇವರು ದಿನಾಂಕ:30.03.2022 ರ ತಮ್ಮ ಪತ್ರದಲ್ಲಿ M.Sc (Physics) ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Late Prof. S.S. Suligavi"** ಇವರ ಹೆಸರಿನಲ್ಲಿ ಪ್ರತಿವರ್ಷ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಛಿಸಿರುವರು.
2. ಸದರಿ ವಿಷಯದ ಕುರಿತು ದಿನಾಂಕ:02-11-2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ.1,00,000/-(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್(ಚೆಕ್-ನಂ 648104 ದಿನಾಂಕ:30.03.2022) ಮೂಲಕ **ರೂ.1,10,000/-**(ರೂಪಾಯಿ ಒಂದು ಲಕ್ಷ ಹತ್ತು ಸಾವಿರ ಮಾತ್ರ) ಗಳನ್ನು ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು. **ದಾನಿಗಳು 2021-22 ನೇ ಸಾಲಿನಲ್ಲಿ ಜರುಗುವ 72 ನೇ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣ ಪದಕ ಪ್ರದಾನ ಮಾಡಲು ಹೆಚ್ಚುವರಿಯಾಗಿ ರೂ.10.000/- ಗಳನ್ನು ಪಾವತಿಸಿದ್ದಾರೆ.**
3. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12-12-2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ-13 ರಲ್ಲಿನ ನಿರ್ದೇಶನದಂತೆ Late Prof. S.S. Suligavi ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.
4. ದಿನಾಂಕ 13-08-2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-10 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

   ***"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ M.Sc ಪದವಿಯ (Physics) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Late Prof. S.S. Suligavi" ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***
5. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ M.Sc.(Physics) ಪದವಿಯ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Late Prof. S.S. Suligavi" ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–08: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ B.A ಪದವಿಯ (Philosophy) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Prin A.M. Jalihal and Smt Vimala A. jalihal" ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ:

01. ಶ್ರೀಮತಿ. ವಿಮಲಾ ಎ ಜಾಲಿಹಾಳ 'ಕಾಲಕಾಲೇಶ್ವರ ಕೃಪಾ', ಮಿಚಗಿನ್ ಕಂಪೌಂಡ, ಸಪ್ತಾಪೂರ, ಧಾರವಾಡ ಇವರು ದಿನಾಂಕ:14.03.2022 ರ ತಮ್ಮ ಪತ್ರದಲ್ಲಿ B.A ಪದವಿಯ (Philosophy) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Prin A.M. Jalihal and Smt Vimala A. Jalihal"** ಇವರ ಹೆಸರಿನಲ್ಲಿ ಪ್ರತಿವರ್ಷ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವಂತೆ ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕ ಸ್ಥಾಪಿಸಲು ಇಚ್ಚಿಸಿರುವರು.

02. ಸದರಿ ವಿಷಯದ ಕುರಿತು ದಿನಾಂಕ:02–11–2011 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸುವರ್ಣ ಪದಕ ಸ್ಥಾಪಿಸಲು ರೂಪಾಯಿ.1,00,000/–(ರೂಪಾಯಿ ಒಂದು ಲಕ್ಷ ಮಾತ್ರ) ಪಾವತಿಸಲು ನಿರ್ಣಯಿಸಲಾಗಿದೆ. ಅದರಂತೆ ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಚೆಕ್(ಚೆಕ್–ನಂ 416159 ದಿನಾಂಕ:14.03.2022) ಮೂಲಕ ರೂ.1,10,000/–(ರೂಪಾಯಿ ಒಂದು ಲಕ್ಷ ಹತ್ತು ಸಾವಿರ ಮಾತ್ರ) ಗಳನ್ನು ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ಪ್ರಕಾರ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣ ಪದಕ ತಯಾರಿಸಲಾಗುವುದು. ದಾನಿಗಳು **2021–22 ನೇ ಸಾಲಿನಲ್ಲಿ ಜರುಗುವ 72 ನೇ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣ ಪದಕ ಪ್ರದಾನ ಮಾಡಲು ಹೆಚ್ಚುವರಿಯಾಗಿ ರೂ.10.000/– ಗಳನ್ನು ಪಾವತಿಸಿರುವರು.**

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ:12–12–2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ–13 ರಲ್ಲಿನ ನಿರ್ದೇಶನದಂತೆ "Prin A.M. Jalihal and Smt Vimala A. Jalihal" ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ 13–08–2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ–11 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

> ***"ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ B.A ಪದವಿಯ (Philosophy) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Prin A.M. Jalihal and Smt Vimala A. jalihal" ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."***

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ B.A.(Philosophy) ಪದವಿಯ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Prin A.M. Jalihal and Smt Vimala A. Jalihal"** ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.

ಕುಲಸಚಿವರು

ಕಲಂ ಸಂಖ್ಯೆ-09: ವಿಷಯ-: ದಿನಾಂಕ **01.08.2014** ಮತ್ತು **03.09.2014** ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ ಸಭೆಯು ದೃಢೀಕರಿಸುವ ಕುರಿತು.

ಟಿಪ್ಪಣಿ:

1) ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ಸಂಖ್ಯೆ D.O.No GS 03 KUM 2014 ದಿನಾಂಕ 14.10.2014 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳಿಗೆ ಯಾವುದೇ ಕ್ರಮ ಜರುಗಿಸಬಾರದೆಂದು ನಿರ್ದೇಶಿಸಿದಂತೆ, ದಿನಾಂಕ 18.12.2014 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸದರ ನಡಾವಳಿಗಳು ದೃಡೀಕರಣಗೊಂಡಿರುವುದಿಲ್ಲ. ಸದರ ಪತ್ರದಲ್ಲಿ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ನಡಾವಳಿಗಳು ಕೂಡ ಯಾವುದೇ ಕ್ರಮ ಜರುಗಿಸಬಾರದೆಂದು ನಿರ್ದೇಶನವಿರುತ್ತದೆ.
2) ದಿನಾಂಕ 01.08.2014 ರ ಸಿಂಡಿಕೇಟ ಸಭೆಯ ಠರಾವು ಸಂಖ್ಯೆ 28 ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ್ದು, ಸದರ ಠರಾವಿನನ್ವಯ ಕ್ರಮ ಜರುಗಿಸಲು ಅನುಮೋದನೆ ಕೋರಿ ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳಿಗೆ ದಿನಾಂಕ 28.02.2018 ಮತ್ತು 19.01.2021 ರ ಪತ್ರಗಳ ಮೂಲಕ ವಿನಂತಿಸಲಾಗಿತ್ತು.
3) ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ದಿನಾಂಕ 18.02.2021 ಮತ್ತು 25.05.2021 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ಒಟ್ಟು 47 ನಡಾವಳಿಗಳು ಹಾಗೂ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ಒಟ್ಟು 09 ನಡಾವಳಿಗಳು ಹಾಗೂ ಅಜೆಂಡಾ ಪ್ರತಿಗಳನ್ನು ಇಂಗ್ಲೀಷ ಭಾಷೆಯಲ್ಲಿ ಸಲ್ಲಿಸುವಂತೆ ನಿರ್ದೇಶಿಸಿದ ಪ್ರಯುಕ್ತ, ಸದರ ಸಭೆಗಳ ನಡಾವಳಿಗಳನ್ನು ಮತ್ತು ಅಜೆಂಡಾ ಪ್ರತಿಗಳನ್ನು ಪತ್ರ ದಿನಾಂಕ 07.06.2021 ರ ಮೂಲಕ ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳಿಗೆ ಸಲ್ಲಿಸಲಾಗಿತ್ತು.
4) ದಿನಾಂಕ 07.06.2021 ರ ಪತ್ರಕ್ಕನುಗುಣವಾಗಿ ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ದಿನಾಂಕ 10.06.2021 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ಹಾಗೂ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಈ ಹಿಂದೆ ಆದೇಶಿಸಿದಂತೆ "ಯಾವುದೇ ಕ್ರಮ ಜರುಗಿಸಬಾರದೆಂಬ" ಆದೇಶವನ್ನು ಈ ಕೆಳಗೆ ನಮೂದಿಸಿದಂತೆ ಹಿಂಪಡೆಯಲಾಗಿರುತ್ತದೆ.

   **"With reference to the above mentioned subject, I am directed to inform that, the orders passed not to act on the resolutions passed in the Syndicate meetings held on 01.08.2014 and 03.09.2014 and the Finance Committee Meeting held on 20.09.2014 has been withdrawn by the Hon'ble Governor and Chancellor".**

5) ಆದ್ದರಿಂದ, ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ ಸಭೆಯ ದೃಡೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

ದಿನಾಂಕ **01.08.2014** ಮತ್ತು **03.09.2014** ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳ ವಿಷಯಗಳನ್ನು ವಿವರವಾಗಿ ತಿಳಿದುಕೊಳ್ಳಲು ಮಾನ್ಯ ಸದಸ್ಯರುಗಳು ಸಮಯಾವಕಾಶ ನೀಡುವಂತೆ ಕೋರಿದ್ದಕ್ಕಾಗಿ ಸದರಿ ವಿಷಯವನ್ನು ಮೂಂದೂಡಲಾಯಿತು.

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-10: ವಿಷಯ-: ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019-20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು-ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರಿಶೀಲಿಸುವ ಕುರಿತು.

ಟಿಪ್ಪಣಿ: -

ದಿನಾಂಕ: 20.12.2019ರ ಸಿಂಡಿಕೇಟ ನಿರ್ಣಯ ಸಂ. 24ರಂತೆ ಈ ಕಚೇರಿ ಸಂಖ್ಯೆ 1256 ದಿನಾಂಕ 9.03.2020 ರ ಮೇರೆಗೆ ರೂ. 10,00,000/-(ಹತ್ತು ಲಕ್ಷ) ದಂಡದ ಹಣ ಭರ್ತಿ ಮಾಡಲು ಪ್ರಾಚಾರ್ಯರಿಗೆ ತಿಳಿಸಲಾಯಿತು. ಅದರಂತೆ ಸದರಿಯವರು DU No. C8411995 ದಿನಾಂಕ 10.03.2020 ರಂದು ರೂ. 3,00,000/- (ಮೂರು ಲಕ್ಷ) ಆನ್‌ಲೈನ ಮುಖಾಂತರ ಭರಿಸಿರುತ್ತಾರೆ.

ಮುಂದುವರೆದು, ಸಿಂಡಿಕೇಟ ಸದಸ್ಯರಾದ ಶ್ರೀ ಸುಧೀಂದ್ರ ದೇಶಪಾಂಡೆ ಇವರು ಮರು ಸಿಂಡಿಕೇಟ ಸಭೆಯ ಕಲಂ ಮಂಡಿಸುವಂತೆ ಕೋರಿದ ಪ್ರಯುಕ್ತ ಸಿಂಡಿಕೇಟ ಕಲಂ ನಂ.41 ದಿನಾಂಕ: 23.05.2020 ರ ಸಭೆಯಲ್ಲಿ ಸಮಿತಿ ರಚಿಸಲು ನಿರ್ಣಯಿಸಿದ ಪ್ರಯುಕ್ತ, ಸಿಂಡಿಕೇಟ ವಿಭಾಗದ ಕಚೇರಿ ಟಿಪ್ಪಣಿ ಸಂಖ್ಯೆ: 163 ದಿನಾಂಕ 20.06.2020 ರ ಮುಖಾಂತರ ಶ್ರೀ ಸುಧೀಂದ್ರ ದೇಶಪಾಂಡೆ ಸಿಂಡಿಕೇಟ ಸದಸ್ಯರು ಇವರು ಅಧ್ಯಕ್ಷತೆಯಲ್ಲಿ ಡಾ.(ಶ್ರೀಮತಿ) ಎ.ಎಸ್. ತಾಮ್ರಗುಂಡಿ, ಡಾ. ಚಿ.ರಮೇಶ, ಕುಲಸಚಿವರು, ಕವಿವಿ, ಧಾರವಾಡ ಮತ್ತು ಕುಲಸಚಿವರು (ಮೌ.ಮಾ), ಪರೀಕ್ಷಾ ವಿಭಾಗ, ಕವಿವಿ ಧಾರವಾಡ ಇವರನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದರು. ಅದರಂತೆ ಸದರ ಸಮಿತಿಯು ದಿನಾಂಕ 12.08.2020 ರಂದು ಸಮಿತಿಯು ಸಭೆ ಸೇರಿ ವರದಿಯನ್ನು ಸಲ್ಲಿಸಿದರು.

ಈ ಮೇಲಿನಂತೆ ವರದಿಯನ್ನು ಸಿಂಡಿಕೇಟ ಸಭೆಗೆ ಮಂಡಿಸಲಾಯಿತು.

**ಸದರ ಸಿಂಡಿಕೇಟ ನಿರ್ಣಯ ಸಂಖ್ಯೆ. 15 ದಿನಾಂಕ: 21 ಮತ್ತು 22.09.2020 ಈ ಕೆಳಗಿನಂತಿರುತ್ತದೆ.**

"2019-20ನೇ ಶೈಕ್ಷಣಿಕ ಸಾಲಿನ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು (ಆಡಳಿತ) ಪ್ರಸ್ತಾಪಿಸಿದಾಗ, ಇನ್ನು ಹೆಚ್ಚಿನ ವಿವರಗಳ ಕೊರತೆಯಿಂದಾಗಿ ಸದರಿ ವಿಷಯದ ಚರ್ಚೆಯನ್ನು ಮುಂದೂಡಲಾಯಿತು".

ಈ ಮೇಲಿನಂತೆ ಸಿಂಡಿಕೇಟ ಸಭೆಯು ಮುಂದೂಡಿರುವುದನ್ನು ಮತ್ತೇ ಪುನಃ ಸಿಂಡಿಕೇಟ ಸಭೆಗೆ ಮಂಡಿಸಲಾಯಿತು.

**ಸಿಂಡಿಕೇಟ ಕಲಂ ನಂ 22. ದಿನಾಂಕ: 21.11.2020**

"ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019-20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮುರುಪರಿಶೀಲಿಸುವ ವಿಷಯವನ್ನು ಸಿಂಡಿಕೇಟ ಸಭೆಯು ಮುಂದೂಡಲಾಯಿತು".

**ಸಿಂಡಿಕೇಟ ಕಲಂ ನಂ 05 ದಿನಾಂಕ: 25.02.2021**

"2019-20ನೇ ಶೈಕ್ಷಣಿಕ ಸಾಲಿನ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು (ಆಡಳಿತ) ಪ್ರಸ್ತಾಪಿಸಿದಾಗ, ಪ್ರಕರಣದ ಬಗ್ಗೆ ಪೂರ್ಣ ವಿವರಗಳ ಟಿಪ್ಪಣಿಯೊಂದಿಗೆ ವಿಷಯವನ್ನು ಮಂಡಿಸಲು ಸೂಚಿಸಿ ವಿಷಯವನ್ನು ಮುಂದೂಡಲಾಯಿತು.

ದಿನಾಂಕ: 25.02.2021ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ 2019-20ನೇ ಶೈಕ್ಷಣಿಕ ಸಾಲಿನ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು (ಆಡಳಿತ) ಪ್ರಸ್ತಾಪಿಸಿದಾಗ,

ಕುಲಸಚಿವರು

ಪ್ರಕರಣದ ಬಗ್ಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿ/ಸಂಯೋಜನಾ ವಿಭಾಗದಿಂದ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಕುರಿತು ಪೂರ್ಣ ವಿವರಗಳ ಟಿಪ್ಪಣಿಯೊಂದಿಗೆ ವಿಷಯವನ್ನು ಮರುಮಂಡಿಸಿದೆ.

2019-20ನೇ ಸಾಲಿನಲ್ಲಿ ಬಿ.ಸಿ.ಎ. ಮೊದಲನೇಯ ಹಾಗೂ ಎರಡನೇ ಸೆಮೆಸ್ಟರ್‌ಗೆ ಕವಿವಿ ಪ್ರವೇಶ ನಿಯಮಾವಳಿ ಅವಧಿ ಮುಗ್ಗಿದ ನಂತರ ಹಾಗೂ ಪ್ರತಿ ಸೆಮೆಸ್ಟರ್‌ಗೆ 45 ಒಳಮಿತಿಗೊಳಪಟ್ಟು(Intake) ಪ್ರವೇಶ ನೀಡಲು ಹಾಗೂ ತದನಂತರ 60 ಮಿತಿಗೊಳಪಟ್ಟು ಸಂಯೋಜನೆ ವಿಭಾಗದಿಂದ ಅನಮತಿಸಲಾಗಿತ್ತು. ಸದರಿ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ನಿರ್ಣಯ ಸಂಖ್ಯೆ. 24 ದಿನಾಂಕ: 20.12.2019ರಲ್ಲಿ ಸದರಿ ಮಹಾವಿದ್ಯಾಲಯಕ್ಕೆ ಸಿಂಡಿಕೇಟನಲ್ಲಿ ರೂ. 10,00,000/-(ಹತ್ತು ಲಕ್ಷ) ಗಳನ್ನು ದಂಡ ವಿಧಿಸಿರುವ ಪ್ರಯುಕ್ತ ಮಹಾವಿದ್ಯಾಲಯವು ದಿನಾಂಕ: 10.03.2020ರಂದು ರೂ. 3,00,000/- ಆನ್‌ಲೈನ ಮುಖಾಂತರ ಭರ್ತಿ ಮಾಡಿ ಕವಿವಿಗೆ ಸಲ್ಲಿಸಿರುತ್ತಾರೆ. ಬಾಕಿ ಉಳಿದ ರೂ. 7,00,000/-ಗಳನ್ನು ಭರಿಸುವ ಕುರಿತು ಪ್ರಾಚಾರ್ಯರು ಪತ್ರ ಮುಖಾಂತರ ಮರು ಪರಿಶೀಲಿಸಲು ಮನವಿ ಸಲ್ಲಿಸಿರುತ್ತಾರೆ. ಅದರಂತೆ 4 ಸಿಂಡಿಕೇಟ ಸಭೆಗಳು ಜರುಗಿದ್ದು, ಸಭೆಗಳಲ್ಲಿ ಚರ್ಚಿಸಿ ಪೂರ್ಣ ವಿವರಗಳ ಟಿಪ್ಪಣಿಯೊಂದಿಗೆ ಮರುಪರಿಶೀಲಿಸಲು ಮುಂದೂಡಲಾಯಿತು. ತದನಂತರ ಪೂರ್ಣ ವಿವರ ಟಿಪ್ಪಣಿಯೊಂದಿಗೆ ಮರುಪರಿಶೀಲಿಸಲು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಸಿಂಡಿಕೇಟ ಸಭೆಯ ನಿರ್ಣಯಗಳು ಈ ಕೆಳಗಿನಂತಿರುತ್ತವೆ.

**ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ. 3 ದಿನಾಂಕ: 29.12.2021**

**"ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019-20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು-ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರಿಶೀಲಿಸುವ ವಿಷಯವನ್ನು ಮುಂದೂಡಲಾಯಿತು".**

**ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ. 24 ದಿನಾಂಕ: 15.07.2022**

**"ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019-20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು-ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರೀಶೀಲಿಸುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಹೆಚ್ಚಿನ ವಿವರವನ್ನು ಪಡೆಯುವುದಕ್ಕಾಗಿ ಶ್ರೀ ಸುಧೀಂದ್ರ ದೇಶಪಾಂಡೆ, ಸಿಂಡಿಕೇಟ ಸದಸ್ಯರಿಗೆ ಸದರಿ ಮಹಾವಿದ್ಯಾಲಯದ ಸಂಬಂಧಿಸಿದವರೊಂದಿಗೆ ಚರ್ಚಿಸಲು ದಿನಾಂಕ ನಿದಗಿಪಡಿಸಲು ಸೂಚಿಸಿ ಈ ವಿಷಯವನ್ನು ಮುಂದೂಡಲಾಯಿತು".**

ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯದ ಸಿಂಡಿಕೇಟ ಸಭೆಯ ನಿರ್ಣಯ ನಂ. 24 ದಿನಾಂಕ: 15.07.2022 ರ ನಿರ್ಣಯದಂತೆ ಕುಲಸಚಿವರ ಸಮ್ಮುಖದಲ್ಲಿ ದಿನಾಂಕ: 10.08.2022 ರಂದು ಅಗತ್ಯ ದಾಖಲೆಗಳೊಂದಿಗೆ ಚರ್ಚಿಸಲಾಯಿತು. ಚರ್ಚೆಯಲ್ಲಿ ಈ ಕೆಳಗಿನವರು ಭಾಗಿಯಾಗಿದ್ದರು.

1. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಶ್ರೀ ಸುಧೀಂದ್ರ ದೇಶಪಾಂಡೆ, ಸಿಂಡಿಕೇಟ ಸದಸ್ಯರು.
3. ಪ್ರಾಚಾರ್ಯರು, ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ.
4. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕ.ವಿ.ವಿ., ಧಾರವಾಡ.
5. ಅಧೀಕ್ಷಕರು, ವಿದ್ಯಾಮಂಡಳ(ಎಸ್&ಟಿ) ವಿಭಾಗ, ಕ.ವಿ.ವಿ., ಧಾರವಾಡ.

ವಿದ್ಯಾಮಂಡಳ ವಿಭಾಗದ ಹಾಗೂ ಸದರ ಮಹಾವಿದ್ಯಾಲಯದ ಪ್ರಾಚಾರ್ಯರು ಮಂಡಿಸಿದ ದಾಖಲೆಗಳನ್ನು ಮಾನ್ಯ ಕುಲಸಚಿವರು ಕೂಲಂಕುಷವಾಗಿ ಪರಿಶೀಲಿಸಿದರು. ಅದರಂತೆ ಮಾನ್ಯ ಸಿಂಡಿಕೇಟ ಸದಸ್ಯರಾದ ಶ್ರೀ ಸುಧೀಂದ್ರ ದೇಶಪಾಂಡೆ ಮತ್ತು ಮಹಾವಿದ್ಯಾಲಯದ ಪ್ರಾಚಾರ್ಯರು ಸಹಮತ ಸೂಚಿಸಿದರು. ಅಂತಿಮವಾಗಿ ಸಭೆಯ ನಿರ್ಣಯ ಈ ಕೆಳಗಿನಂತಿದೆ;

**"2019-20ನೇ ಸಾಲಿನಲ್ಲಿ ಬಿಸಿಎ ಕೋರ್ಸಿಗೆ ವಿಶ್ವವಿದ್ಯಾಲಯದಿಂದ (ಸಿಡಿಸಿ ವಿಭಾಗ) ಸಂಯೋಜನೆ ಮಂಜೂರಾಗದ ಪೂರ್ವದಲ್ಲಿಯೇ ಮತ್ತು ಒಂದು ವಿದ್ಯಾರ್ಥಿಯ ಪ್ರವೇಶ ಪೂರ್ವದಲ್ಲಿ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ ಪಡೆಯದೇ ಪ್ರವೇಶಾತಿ ನೀಡಿರುವ ಕುರಿತು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿ ಮಹಾವಿದ್ಯಾಲಯದಿಂದಾದ ನಿಯಮಗಳ ಪಾಲನೆ ಲೋಪದ ಹಿನ್ನೆಲೆಯಲ್ಲಿ ವಿಧಿಸುವ ದಂಡದ ಶುಲ್ಕದ ವಿವರ ಈ ಕೆಳಗಿನಂತಿರುತ್ತದೆ".**

ಕುಲಸಚಿವರು

ಕುಲಪತಿಗಳು

College Intake-45

**Kamadenu BCA College, Karwar**

ಪ್ರವೇಶಾತಿಗೆ ದಂಡ ಸಹಿತ (ರೂ. 9,240/–) ಕೊನೆಯ ದಿನಾಂಕ 03.08.2019

| Sl.No. | ವಿವರಗಳು | ಭರಿಸಬೇಕಾದ ಶುಲ್ಕ/ದಂಡದ ಶುಲ್ಕ |
|---|---|---|
| 1 | 1 to 30 Before 24.07.2019 with penalty submitted | – |
| 2 | 01 Student admission before 03.08.2019 with penalty submitted | – |
| 3 | 14 ವಿದ್ಯಾರ್ಥಿಗಳ ಪ್ರವೇಶಾತಿ ಕೊನೆಯ ದಿನಾಂಕದ ನಂತರ ಪಡೆದಿದ್ದು, | – |
| 4 | 08 ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಒಳಮಿತಿ ಇರಲಾರದೆ ಪ್ರವೇಶ ಪಡೆದಿರುತ್ತಾರೆ. | – |
| 5 | 01 ವಿದ್ಯಾರ್ಥಿಯ ಅರ್ಹತಾ ಪ್ರವೇಶಾತಿ ಪಡೆಯದೇ ಪ್ರವೇಶಾತಿ ಪಡೆದಿದ್ದು | – |
| 6 | 14 ವಿದ್ಯಾರ್ಥಿಗಳ ಪ್ರವೇಶಾತಿ ಕೊನೆಯ ದಿನಾಂಕದ ನಂತರ ಪಡೆದಿದ್ದಕ್ಕೆ ಪ್ರತಿ ವಿದ್ಯಾರ್ಥಿಗೆ ರೂ. 9,240 + 10,000/–= ರೂ. 19,240 x 14 = | ರೂ. 2,69,360/– |
| 7 | 08 ವಿದ್ಯಾರ್ಥಿಗಳ ಒಳಮಿತಿಗಿಂತ ಹೆಚ್ಚಿಗೆ ಪ್ರವೇಶಾತಿ ಪಡೆದಿರುವುದು. ರೂ. 9,240 + 10,000 = 19,240 x 8 (Rs. 10,000/- Penalty of Vice-Chancellor's Discretionary Power) | ರೂ. 1,53,920/– |
| 8 | Late Submission of days from 03.08.2019 to 08.12.2019 = 128 days (August, 29, Sept. 30, Oct. 31, Nov. 30 and Dec. 08) Late Submission days 128 x 120 | Rs. 15,360/- |
| 9 | Eligibilities = 25,000 + 1,100 | |
| | | Rs. 26,100/- |
| | **Total** | **Rs. 4,64,740/-** |

ದಿನಾಂಕ: 15.7.2022 ರ ಸಿಂಡಿಕೇಟ ಸಭೆಯ ನಿರ್ಣಯದಂತೆ, ದಿನಾಂಕ: 10.08.2022 ರಂದು ಕುಲಸಚಿವರ ಸಮ್ಮುಖದಲ್ಲಿ ದಾಖಲೆಗಳ ಸಮೇತ ಪರಿಶೀಲನೆಯಂತೆ ಸದರ ಮಹಾವಿದ್ಯಾಲಯದ ಪ್ರಾಚಾರ್ಯರು ಒಟ್ಟು ಶುಲ್ಕ/ದಂಡದ ಶುಲ್ಕ ರೂ. 4,64,740/– ಭರಿಸಬೇಕಾಗಿದ್ದು ಈ ವಿಷಯದ ಪರಿಶೀಲನೆಗೆ ಪುನರ್ ಪರಿಶೀಲನೆಗೆ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಯಿತು.

## ನಿರ್ಣಯ

ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ **2019–20ನೇ** ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ವಿದ್ಯಾರ್ಥಿಗಳ ಪ್ರವೇಶ ನೀಡಿ ವಿಶ್ವವಿದ್ಯಾಲಯದ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು–ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂದಿಸಿದಂತೆ, ದಿನಾಂಕ: **15.7.2022** ರ ಸಿಂಡಿಕೇಟ ಸಭೆಯು ಕೈಗೊಂಡ ನಿರ್ಣಯದಂತೆ, ದಿನಾಂಕ: **10.08.2022** ರಂದು ಕುಲಸಚಿವರ ಸಮ್ಮುಖದಲ್ಲಿ ದಾಖಲೆಗಳ ಸಮೇತ ಪರಿಶೀಲನೆಯಂತೆ ಮತ್ತೋಮ್ಮೆ ಸುದೀರ್ಘವಾಗಿ ಚರ್ಚಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶುಲ್ಕ/ದಂಡ **ರೂ.4,64,740/–** ಬದಲಾಗಿ ಸದರ ಮಹಾವಿದ್ಯಾಲಯದ ಪ್ರಾಚಾರ್ಯರು ಒಟ್ಟು ಶುಲ್ಕ/ದಂಡದ ಶುಲ್ಕ **ರೂ.3,24,740/–** ಭರಿಸಲು ಕ್ರಮ ವಹಿಸಬೇಕೆಂದು ಸಿಂಡಿಕೇಟ ಠರಾಯಿಸಿತು.

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-11: ವಿಷಯ-: ಶ್ರೀ ಸಂಕೇತ್ ಎಸ್. ದಿವಾನ್, ಕಿರಿಯ ಸಹಾಯಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ದಿನಾಂಕ: 24.04.2022 ರಿಂದ ಅನ್ವಯವಾಗುವಂತೆ ಸೇವೆಗೆ ರಾಜೀನಾಮೆ ಸಲ್ಲಿಸಿರುವ ವಿಷಯದ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಮುಂದೆ ಪರಿಶೀಲಿಸುವ ಕುರಿತು.

*ಪ್ರಸ್ತಾವನೆ:*

ಶ್ರೀ ಸಂಕೇತ್ ಎಸ್. ದಿವಾನ್ ಇವರ ಕಚೇರಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ಪ್ರಯುಕ್ತ ಮತ್ತೊಮ್ಮೆ ನೋಟೀಸ್ ನೀಡಿ ಅವರಿಂದ ಸ್ಪಷ್ಟೀಕರಣ ಪಡೆಯುವ ಕ್ರಮ ಜಾರಿಯಲ್ಲಿರುವಾಗಲೇ ಪ್ರಾಚಾರ್ಯರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ಪತ್ರ ಸಂ. ಕಕಮಧಾ/ಸಿಬ್ಬಂದಿ/2022-23/214 ದಿನಾಂಕ: 07.06.2022ರ ಮೂಲಕ, ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕಿರಿಯ ಸಹಾಯಕರೆಂದು ಕಾರ್ಯನಿರ್ವಹಿಸುತ್ತಿರುವ ಶ್ರೀ ಸಂಕೇತ್ ಎಸ್. ದಿವಾನ್ ಇವರು ಕೋರಿಯರ್ ಮುಖಾಂತರ ಕಳುಹಿಸಿದ ರಾಜೀನಾಮೆ ಪತ್ರ ಹಾಗೂ ವಿಶ್ವವಿದ್ಯಾಲಯದ ಗುರುತಿನ ಪತ್ರವನ್ನು (Identity Card) ದಿನಾಂಕ: 06.06.2022 ರಂದು ಕಚೇರಿಯಲ್ಲಿ ಸ್ವೀಕರಿಸಲಾಗಿರುತ್ತದೆ.

ಶ್ರೀ ಸಂಕೇತ್ ಎಸ್. ದಿವಾನ್ ಇವರು ಕೋರಿಯರ್ ಮುಖಾಂತರ ಕಳುಹಿಸಿದ ರಾಜೀನಾಮೆ ಪತ್ರ ಹಾಗೂ ವಿಶ್ವವಿದ್ಯಾಲಯದ ಗುರುತಿನ ಪತ್ರವನ್ನು (Identity Card) ಪ್ರಾಚಾರ್ಯರು ತಮ್ಮ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿರುತ್ತಾರೆ.

ಮುಂದುವರೆದು, ಪ್ರಾಚಾರ್ಯರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ತಮ್ಮ ಪತ್ರದೊಂದಿಗೆ ಲಗತ್ತಿಸಿದ ಪತ್ರದಲ್ಲಿ ಶ್ರೀ ಸಂಕೇತ್ ಎಸ್. ದಿವಾನ್, ಕಿರಿಯ ಸಹಾಯಕರು ಇವರು ಧಾರವಾಡದ ಕರ್ನಾಟಕ ಕಾಲೇಜಿನ ಕಿರಿಯ ಸಹಾಯಕ ಹುದ್ದೆಗೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದೊಂದಿಗೆ ಕೆಲಸ ಮಾಡುವುದು ಸಂತೋಷದ ವಿಷಯ ಕೆಲವು ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಸಂಸ್ಥೆಯು ನಿರೀಕ್ಷಿಸಿದ ಸೇವಾವಧಿಯನ್ನು ಪೂರ್ಣಗೊಳಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ಹಠಾತ್ ನಿರ್ಧಾರಕ್ಕಾಗಿ ಕ್ಷಮೆಯಾಚಿಸಿ ಮತ್ತು ಈ ನಿರ್ಧಾರವು ಸಂಸ್ಥೆಯ ಕಾರ್ಯಾಚರಣೆಗಳಿಗೆ ವೆಚ್ಚವಾಗುವುದಿಲ್ಲವೆಂದು ಭಾವಿಸಿ, ಸಲ್ಲಿಸಿದ ರಾಜೀನಾಮೆ ಪತ್ರವನ್ನು ಅಂಗೀಕರಿಸಲು ಮತ್ತು ಕರ್ತವ್ಯದಿಂದ ಬಿಡುಗಡೆ ಮಾಡಲು ವಿನಂತಿಸಿಕೊಂಡಿರುತ್ತಾರೆ. ಅವರು ತಮ್ಮ ರಾಜೀನಾಮೆ ಪತ್ರದಲ್ಲಿ ಅವರ ಸೇವಾವಧಿ ದಿನಾಂಕ : 17.02.2020 ರಿಂದ 24.04.2022 ಎಂದು ತಿಳಿಸಿದ್ದಾರೆ.

ಶ್ರೀ ಸಂಕೇತ್ ಎಸ್. ದಿವಾನ್ ಇವರನ್ನು ಈ ಕಚೇರಿ ಆದೇಶ ಸಂಖ್ಯೆ 5110 ದಿನಾಂಕ: 17.02.2020 ರ ಪ್ರಕಾರ, ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಯಲ್ಲಿ ನೇಮಕಾತಿ ಮಾಡಲಾಗಿದೆ. ಅದರಂತೆ ಸದರಿಯವರು ದಿನಾಂಕ: 17.02.2020 ರಂದು ಕಚೇರಿ ವೇಳೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಸದರಿಯವರ ನೇಮಕವು ವಿಶ್ವವಿದ್ಯಾಲಯದ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತದೆ. ಅನುಶಾಸನದನ್ವಯ ಸೇವೆಗೆ ಸೇರಿದ ದಿನಾಂಕದಿಂದ ಎರಡು ವರ್ಷಗಳವರೆಗೆ ಪರೀಕ್ಷಾರ್ಥ ಸೇವಾವಧಿಯಲ್ಲಿ ಇರುವರು. ಸದರಿಯವರ ಎರಡು ವರ್ಷದ ಪರೀಕ್ಷಾರ್ಥ ಅವಧಿ ಪೂರ್ಣಗೊಳ್ಳುವ ಪೂರ್ವದಲ್ಲಿ ದಿನಾಂಕ: 04.02.2022 ರಿಂದ 18.03.2022 ರ ವರೆಗೆ ಕಚೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿರುವುದರಿಂದ ಅವರ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಣೆ ಮಾಡಿರುವುದಿಲ್ಲ. ನಂತರ ಅವರು ಸ್ಥಳಾಂತರಗೊಂಡ ಕರ್ನಾಟಕ ಕಲಾ ಮಹಾವಿದ್ಯಾಲಯದ ಅವರ ಸೇವೆಗೆ ಸರಿಯಾಗಿ ಬರುತ್ತಿಲ್ಲವೆಂದು ಮತ್ತು ಕಚೇರಿ ವೇಳೆಯಲ್ಲಿ ಲಭ್ಯವಿರದೇ ಇರುವುದರಿಂದ ಕಚೇರಿ ಕೆಲಸಗಳಿಗೆ ತೊಂದರೆಯಾಗಿದೆ ಎಂದು ಪ್ರಾಚಾರ್ಯರು ವರದಿ ಮಾಡಿರುತ್ತಾರೆ. ಅವರ ಅನಧಿಕೃತ ಗೈರುಹಾಜರಿ ಮತ್ತು ಅಶಿಸ್ತಿನ ವರ್ತನೆಗೆ ಅವರ ಮೇಲೆ ಕ್ರಮ ಜರುಗಿಸುವ ಪ್ರಕ್ರಿಯೆ ಜಾರಿಯಲ್ಲಿದ್ದಾಗಲೇ ಅವರು ತಮ್ಮ ಸೇವೆಗೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಹಾಗೂ ದಿನಾಂಕ : 24.04.2022 ರಿಂದ ಕಚೇರಿ ಕೆಲಸಕ್ಕೆ ಗೈರುಹಾಜರಿ ಉಳಿದಿರುತ್ತಾರೆ.

ಸದರ ವಿಷಯದ ಕುರಿತು ಕೆ.ಸಿ.ಎಸ್.ಆರ್. ನಿಯಮ 252 (ಸಿ) ಈ ಕೆಳಗಿನಂತೆ ಇರುತ್ತದೆ.

**Procedure to be followed in accepting resignation:**

ಕುಲಸಚಿವರು ಕುಲಪತಿಗಳು

A Government servant intending to resign from the post held by him should give a notice of his intention to resign at least a month in advance indicating the date from which he intends to resign. The Competent Authority may accept a notice of less than a month if there are circumstances warranting such acceptance. A resignation becomes effective when it is accepted and the concerned Government servant is relieved of his duties. It is, therefore, necessary to see that handing over charge, recovery of dues if any from the Government servant and such other formalities are completed before the Government servant is relieved of his duties. **Where however, a Government servant tenders resignation during his unauthorized absence or leave the resignation may be accepted from the date he remained unauthorized absent or from the expiry of leave sanctioned to him, as the case may be. In such an event, the question of relieving the Government servant of his duties does not arise and the resignation becomes effective on its acceptance by the Competent Authority.**

ಆದ್ದರಿಂದ, ಶ್ರೀ ಸಂಕೇತ್ ಎಸ್. ದಿವಾನ್, ಕಿರಿಯ ಸಹಾಯಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರ ವಿನಂತಿಯ ಮೇರೆಗೆ ಕೆ.ಸಿ.ಎಸ್. ನಿಯಮ (252)(ಸಿ) ರ ಪ್ರಕಾರ ಸದರಿಯವರು ಸಲ್ಲಿಸಿರುವ ರಾಜೀನಾಮೆ ಅಂಗೀಕಾರದ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಶ್ರೀ ಸಂಕೇತ್ ಎಸ್. ದಿವಾನ್, ಕಿರಿಯ ಸಹಾಯಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ದಿನಾಂಕ: 24.04.2022 ರಿಂದ ಅನ್ವಯವಾಗುವಂತೆ ಸೇವೆಗೆ ರಾಜೀನಾಮೆ ಸಲ್ಲಿಸಿರುವ ವಿಷಯದ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಕೆ.ಸಿ.ಎಸ್. ನಿಯಮ (252)(ಸಿ) ರ ಪ್ರಕಾರ ಕ್ರಮ ಜರುಗಿಸುವಂತೆ ನಿರ್ಣಯಿಸಲಾಯಿತು.**

ಕುಲಸಚಿವರು　　　　　　　　　　　　　　　　　　ಕುಲಪತಿಗಳು

ಕಲಂ ಸಂಖ್ಯೆ–12: ವಿಷಯ–: ಶ್ರೀ. ಶ್ರೀಧರ. ಬಿ. ಭಜಂತ್ರಿ, ಉಪಕುಲಸಚಿವರು, ಕವಿವಿ ಇವರು ಭಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಚಿತ್ರದುರ್ಗ ಇಲ್ಲಿಗೆ ಕಾರ್ಯದರ್ಶಿ ಎಂದು ನಿಯೋಜನೆಗೊಂಡಿರುವ ಪ್ರಯುಕ್ತ ಅವರನ್ನು ಕವಿವಿ ಸೇವೆಯಿಂದ ಬಿಡುಗಡೆಗೊಳಿಸಿದ ಮಾನ್ಯ ಕುಲಪತಿಗಳ ಕ್ರಮವನ್ನು ಸಿಂಡಿಕೇಟ ಸಭೆಯ ಧೃಡೀಕರಣಕ್ಕಾಗಿ.

ಪ್ರಸ್ತಾವನೆ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ : ಯೋಇ 303 ಅಮುಕಾ 2021, ದಿನಾಂಕ 30.08.2021 ರಲ್ಲಿ ಶ್ರೀ ಶ್ರೀಧರ ಬಿ.ಭಜಂತ್ರಿ, ಉಪಕುಲಸಚಿವರು, ಸಂಪರ್ಕ ಶಿಕ್ಷಣ ವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕಾರ್ಯದರ್ಶಿ, ಭಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಚಿತ್ರದುರ್ಗ ಈ ಹುದ್ದೆಗೆ ನಿಯೋಜಿಸಬೇಕೆಂದು ಮಾನ್ಯ ಯೋಜನಾ ಸಚಿವರು ಆದೇಶ ನೀಡಿರುತ್ತಾರೆ ಆದ್ದರಿಂದ, ಶ್ರೀ ಶ್ರೀಧರ ಬಿ.ಭಜಂತ್ರಿ, ಉಪಕುಲಸಚಿವರು ಇವರ ಸೇವೆಯನ್ನು ಯೋಜನಾ ಇಲಾಖೆಗೆ ನೀಡುವ ಬಗ್ಗೆ ಕೂಡಲೇ ಸಹಮತಿಯನ್ನು ಕಳುಹಿಸಲು ಕೋರಿದ್ದರು.

ಶ್ರೀ. ಶ್ರೀಧರ ಬಿ. ಭಜಂತ್ರಿ, ಉಪಕುಲಸಚಿವರು, ಸಂಪರ್ಕ ಶಿಕ್ಷಣ ವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಕಾರ್ಯದರ್ಶಿ, ಭಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಚಿತ್ರದುರ್ಗ ಈ ಹುದ್ದೆಗೆ ನಿಯೋಜಿಸಲು ವಿಶ್ವವಿದ್ಯಾಲಯದ ಸಹಮತಿಯನ್ನು ನೀಡಲು ಕೋರಿರುವ ಪ್ರಯುಕ್ತ, ಕೆಸಿಎಸ್‌ಆರ್ ನಿಯಮ 50 ಮತ್ತು ವಿಶ್ವವಿದ್ಯಾಲಯದ ಇತರೆ ಎಲ್ಲ ಷರತ್ತಿಗೊಳಪಟ್ಟು ಸದರಿಯವರನ್ನು ಕಾರ್ಯದರ್ಶಿ ಹುದ್ದೆಗೆ ನಿಯೋಜಿಸಿಕೊಳ್ಳಲು ಸಹಮತಿಯನ್ನು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಈ ಕಚೇರಿ ಪತ್ರ ಸಂ: 1049, ದಿನಾಂಕ: 31.08.2021 ರ ಮೂಲಕ ತಿಳಿಸಲಾಗಿತ್ತು.

ಸರ್ಕಾರದ ಅದೀನ ಕಾರ್ಯದರ್ಶಿ(ಎಸ್–1) ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧಿಸೂಚನೆ ಸಂ; ಪಿಡಿಎಸ್ 75 ಎಸ್‌ಎಸ್‌ಎಂ 2021, ದಿನಾಂಕ: 31.08.2021 ಶ್ರೀ. ಶ್ರೀಧರ ಬಿ. ಭಜಂತ್ರಿ, ಉಪಕುಲಸಚಿವರು, ಸಂಪರ್ಕ ಶಿಕ್ಷಣ ವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ವಂತ ವೇತನ ಶ್ರೇಣಿಯ ಮೇಲೆ ನಿಯೋಜನಾ ಷರತ್ತಿಗೊಳಪಟ್ಟು ಭಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ ಇಲ್ಲಿನ ಕಾರ್ಯದರ್ಶಿಹುದ್ದೆಗೆ ನಿಯೋಜನೆ ಮೇಲೆ ನೇಮಿಸಿ ಆದೇಶಿಸಿತ್ತು.

ಸರ್ಕಾರದ ಈ ಮೇಲಿನ ಅಧಿಸೂಚನೆ ಅನ್ವಯ ಶ್ರೀ. ಶ್ರೀಧರ ಬಿ. ಭಜಂತ್ರಿ ಇವರ ಕೋರಿಕೆಯ ಹಿನ್ನಲೆಯಲ್ಲಿ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಶ್ರೀ. ಶ್ರೀಧರ ಬಿ. ಭಜಂತ್ರಿ, ಉಪಕುಲಸಚಿವರು, ಸಂಪರ್ಕ ಶಿಕ್ಷಣ ವಿದ್ಯಾಲಯ, ಕವಿವಿ ಧಾರವಾಡ ಇವರನ್ನು ಕೆ.ಸಿ.ಎಸ್ ನಿಯಮ 50 ರ ಪ್ರಕಾರ ಹಾಗೂ ಸಿಂಡಿಕೇಟ್ ಸಭೆಯ ದೃಢೀಕರಣಕ್ಕೆ ಒಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿ ಈ ಕಚೇರಿ ಪತ್ರ ಸಂಖ್ಯೆ 1056ಎ, ದಿನಾಂಕ: 01.09.2021 ರ ಮೂಲಕ ಆದೇಶಿಸಲಾಗಿದೆ.

ಆದ್ದರಿಂದ, ಶ್ರೀ ಶ್ರೀಧರ ಬಿ. ಭಜಂತ್ರಿ, ಇವರು ಭಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ಹುದ್ದೆಗೆ ನಿಯೋಜನೆಗೊಂಡ ಪ್ರಯುಕ್ತ ಅವರನ್ನು ಕವಿವಿ ಸೇವೆಯಿಂದ ಬಿಡುಗಡೆಗೊಳಿಸಿದ ಮಾನ್ಯ ಕುಲಪತಿಗಳ ಆಡಳಿತಾತ್ಮಕ ಕ್ರಮವನ್ನು ಸಿಂಡಿಕೇಟ್ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

ಶ್ರೀ. ಶ್ರೀಧರ ಬಿ. ಭಜಂತ್ರಿ, ಉಪಕುಲಸಚಿವರು, ಕ.ವಿ.ವಿ. ಧಾರವಾಡ ಇವರನ್ನು ಭಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಚಿತ್ರದುರ್ಗ ಇಲ್ಲಿಗೆ ಕಾರ್ಯದರ್ಶಿ ಎಂದು ನಿಯೋಜನೆಗೊಂಡಿರುವುದರಿಂದ, ಇವರನ್ನು ವಿಶ್ವವಿದ್ಯಾಲಯದಿಂದ ನಿಯೋಜನೆ ಮೇಲೆ ಸದರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ-13: ವಿಷಯ-: Consideration of the request of Dr.R.R.Biradar, Professor, P.G. Dept. of Economics, K.U.Dharwad for sanction of Sabbatical Leave for one year from 01.11.2022 to 31.10.2023 to carry out research project on "Impact of Alcohol Consumption on Poverty in Karnataka: A Household Level Study" in Karnatak University Dharwad.

**NOTE:**

Dr.R.R.Biradar, Professor, P.G. Dept. of Economics, K.U.Dharwad vide his letter dated: 14.09.2022 requested for sanction of Sabbatical Leave for one year from 01.11.2022 to 31.10.2023 to carry out research project on "Impact of Alcohol Consumption on Poverty in Karnataka: A Household Level Study" in Karnatak University Dharwad.

**The Statute regarding Grant of Sabbatical Leave is as follows:**

**Eligibility:**

Sabbatical leave shall be granted to teachers in the Departments of Studies with a view to enable them to devote their time towards promotion of research subject to the following conditions:

1. Permanent whole time teachers of the University who have Completed 10 years of service may be granted sabbatical leave to Study research or other academic pursuit solely for the object of increasing their proficiency and usefulness to the University. This leave shall not be granted to a teacher who has less than three years of service in the University to retire. Only One teacher from a Department may avail himself of the Sabbatical leave at a time.

2. The duration of the leave shall not exceed one year. Teachers who have actually worked in the University for not less than (10) Ten years since their return from the earlier spell of sabbatical leave are eligible. Provided further that sabbatical leave shall not be granted until after the expiry of five years from the date of the teachers return from previous study leave or any other kind of training programme.

**Conditions**

The teacher shall execute a bond, with proper sureties as in the case of study leave, that after expiry of Sabbatical leave he will return to the service of the University and server thereafter at least for three years failing which he will refund to the University the leave salary and allowances and other expenses, if any, spent on him or paid to him on this behalf together with interest at the rate of 6% per annum to be calculated from the date of such payment.

1. A teacher shall, during the period of Sabbatical leave be paid full pay and allowances (subject to the prescribed conditions being fulfilled) at the rate applicable to him immediately prior to his proceeding on Sabbatical leave may be also given traveling and contingency expenses not exceeding Rs. 2000/- per semester if he proposes to work in other institutions on a project.

2. " The Syndicate shall select awardees from amongst the applicants in such a way that the candidates get distributed amongst all departments" as against the present sentence " The Syndicate shall select from amongst applicants keeping in view that the candidates get distributed amongst all departments".

3. A teacher on Sabbatical leave shall not take up, during the period of that leave, any regular appointment under another organization in India or abroad. He may, however, be allowed to accept a fellowship or a research Scholarship or ad-hoc teaching and research assignment with honorarium or any other form of assistance, other than regular employees in an institution of advance studies, provided that in such cases the Syndicate, may, if so desires, sanction Sabbatical leave on reduced pay and allowances.

ಕುಲಸಚಿವರು ಕುಲಪತಿಗಳು

4. During the period of Sabbatical Leave the Teacher shall be allowed to draw the increment on the due date. The period of leave shall also count as service for purposes of pension/Contributory provided fund provided the teacher rejoins the University on the expiry of his leave.

**Note:**

1. The Programme to be followed by the awardee during Sabbatical Leave shall be submitted to the University for approval at least three months, before he proposes to proceed on Sabbatical Leave along with the applicant for grant of leave.
2. On return from leave the teacher shall report to the University within three months of his return, the nature of studies, research or other work undertaken during the period of leave. The written report shall be reviewed by the Committee that had approved of the project.

In this connection it is submitted that, after going through his service records it is noticed that Dr.R.R.Biradar has joined for his duties as "**Lecturer**" in the P. G. Dept. of Economics, K.U.Dharwad on **13.07.1999**. His service details are as follows:

| Designation | Date | Remarks |
|---|---|---|
| **Sr. Lecturer** | **13.07.2004** | CAS Promotion |
| **Reader** | **13.07.2009** | CAS Promotion |
| **Associate Professor** | **13.07.2012** | Re-designated as per revised UGC 2006 Scale Pay |
| **Professor** | **13.07.2015** | CAS Promotion |

Dr.R.R. Biradar has not availed Sabbatical Leave in his service earlier. His date of retirement in this university is **31.07.2030.** He has more than three years of service in this university to retire. Presently, no teaching staff in Economics department has availed Sabbatical Leave.

In view of the above, the request of Dr.R.R. Biradar, Professor, P.G. Dept. of Economics, K.U. Dharwad for sanction of Sabbatical Leave for one year from 01.11.2022 to 31.10.2023 to carry out research project on "Impact of Alcohol Consumption on Poverty in Karnataka: A Household Level Study" in Karnatak University Dharwad is placed before Syndicate for its consideration.

## ನಿರ್ಣಯ

**Syndicate considered and approved the request of Dr.R.R.Biradar, Professor, P.G. Dept. of Economics, K.U.Dharwad for sanction of Sabbatical Leave for one year from 01.11.2022 to 31.10.2023 to carry out research project on "Impact of Alcohol Consumption on Poverty in Karnataka: A Household Level Study" in Karnatak University Dharwad with terms and conditions as specified in the Statute.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-14: ವಿಷಯ-: ಕರ್ನಾಟಕ ವಿಶ್ವವಿದ್ಯಾಲಯದ ಹೊಸ/ಹಳೆಯ ಅತಿಥಿಗೃಹದ ಭೋಜನಾಲಯದ ಊಟ/ಉಪಹಾರದ ದರಗಳನ್ನು ಪರಿಷ್ಕರಿಸುವ ಕುರಿತು.

ಟಿಪ್ಪಣಿ:

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊಸ/ಹಳೆಯ ಅತಿಥಿಗೃಹದ ಭೋಜನಾಲಯದ ಊಟ/ಉಪಹಾರದ ಪ್ರಸ್ತುತ ಶ್ರೀಮತಿ. ಲಕ್ಷ್ಮೀ ಎಂ ಚವ್ಹಾಣ ಇವರು ಸದ್ಯಕ್ಕೆ ಮಾರುಕಟ್ಟೆಯ ಊಟ/ಉಪಹಾರಕ್ಕೆ ಬಳಸುವ ಎಣ್ಣೆ, ತರಕಾರಿ ಹಾಗೂ ಕೆಲಸಗಾರರ ವೇತನವು ಹೆಚ್ಚುವರಿಯಾಗಿರುವುದರಿಂದ ಪ್ರಸ್ತುತ ಇದ್ದ ಊಟ/ಉಪಹಾರದ ದರಗಳನ್ನು ಪರಿಷ್ಕರಿಸುವಂತೆ ಪತ್ರವನ್ನು ಸಲ್ಲಿಸಿದ್ದು ಇರುತ್ತದೆ. ಸದರ ಪತ್ರದಲ್ಲಿ ಈ ಕೆಳಗಿನಂತೆ ವಿನಂತಿಸಿಕೊಂಡಿರುತ್ತಾರೆ:

"As the groceries/vegetables/edible oil prices are gone up drastically and labour charges are also gone up. Therefore, I humbly request you to revise the catering services rates at earliest. And I am enclosing the proposed revised rate list of the catering services for your kind approval".

ಪ್ರಸ್ತುತ ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ: ಕೆಯು/ಜಿಎಡಿ/ಅತಿಥಿಗೃಹ/21-22/83, ದಿನಾಂಕ: 17.07.2021 ರ ಅನುಸಾರ ನಿಗದಿಪಡಿಸಿದ ದರಪಟ್ಟಿ ಹಾಗೂ ಮೆಸ್ ಗುತ್ತಿಗೆದಾರರು ವಿನಂತಿಸಿದ ಪರಿಷ್ಕೃತ ದರಪಟ್ಟಿ ದರ ಹಾಗೂ ಮೆಸ್ ಗುತ್ತಿಗೆದಾರರು ಸಲ್ಲಿಸಿದ ಪ್ರಸ್ತುತ ಮಾರುಕಟ್ಟೆ ದರಗಳ ವಿವರಗಳು ಈ ಕೆಳಗಿನಂತೆ ಇರುತ್ತದೆ:

| ಅ.ನಂ | ವಿವರ | ಪ್ರಸ್ತುತ ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ: ಕೆಯು/ಜಿಎಡಿ/ಅತಿಥಿಗೃಹ/21-22/83, ದಿನಾಂಕ: 17.07.2021 ರ ಅನುಸಾರ ನಿಗದಿಪಡಿಸಿದ ದರಪಟ್ಟಿ ರೂ. | ಮೆಸ್ ಗುತ್ತಿಗೆದಾರರು ವಿನಂತಿಸಿದ ಪರಿಷ್ಕೃತ ದರಪಟ್ಟಿ ರೂ. | ಮೆಸ್ ಗುತ್ತಿಗೆದಾರರು ಸಲ್ಲಿಸಿದ ಪ್ರಸ್ತುತ ಮಾರುಕಟ್ಟೆ ದರ ರೂ. |
|---|---|---|---|---|
| 1 | ಸಸ್ಯಾಹಾರಿ 1 ಸಾದಾ ಊಟ | 40=00 | 70=00 | 90=00 |
| 2 | ಸಸ್ಯಾಹಾರಿ ಸ್ಪೇಷಲ್ 1 ಊಟ | 60=00 | 120=00 | 130=00 |
| ಉಪಹಾರದ ವಿವರ ಹಾಗೂ ದರ | | | | |
| 1 | ಚಹಾ ಒಂದು ಕಪ್ಪು | 10=00 | 15=00 | 20=00 |
| 2 | ಕೆ.ಟಿ ಸಕ್ಕರೆ ಸಹಿತ/ರಹಿತ | 10=00 | 20=00 | 25=00 |
| 3 | ಪಾಟ್ ಸರ್ವೀಸ್ ಚಹ (ಎರಡು ಕಪ್ಪು) | 15=00 | 30=00 | 40=00 |
| 4 | ಕಾಫಿ (ಇನ್ಸ್ಟಂಟ್) 1 ಕಪ್ಪು | 15=00 | 20=00 | 25=00 |
| 5 | ಹಾಲು ಒಂದು ಕಪ್ಪು | 10=00 | 20=00 | 20=00 |
| 6 | ಕಾಫಿ ಫಿಲ್ಟರ್ 1 ಕಪ್ಪು | 15=00 | 20=00 | 25=00 |
| 7 | ಹಾಲು ಬೋರಮಿಟಾ 1 ಕಪ್ಪು | 15=00 | 25=00 | 30=00 |
| 8 | ಕಾರ್ನಫ್ಲೇಕ್ ಹಾಲು.ಸಕ್ಕರೆ.(ಒಂದು ಸ್ಟ್ಯಾಂಡರ್ಡ ಬಟ್ಟಲು) | 15=00 | 25=00 | 40=00 |
| 9 | ಬ್ರೆಡ್ ( ನಾಲ್ಕು ಸ್ಲಾಯಿಸಗಳು ಸಾದಾ ಬೇಯಿಸಿದ್ದು) | 15=00 | 25=00 | 40=00 |
| 10 | ಅಮಲೇಟ್ ಎರಡು ತತ್ತಿಯದು | 20=00 | 30=00 | 40=00 |
| 11 | ತತ್ತಿಗಳು (ಎರಡು ಕುದಿಸಿದ್ದು) | 15=00 | 25=00 | 30=00 |
| 12 | ಉಪ್ಪಿಟ್ಟು/ಅವಲಕ್ಕಿ ಒಂದು ಪ್ಲೇಟ್ | 15=00 | 25=00 | 30=00 |
| 13 | ಇಡ್ಲಿ ಎರಡು ಸ್ಟಾಂಡರ್ಡ ಸಾಯಿಜ್ ಕೊಬ್ಬರಿ ಚಟ್ನಿ + ಸಂಬಾರ | 15=00 | 25=00 | 30=00 |
| 14 | ಉದ್ದಿನವಡಾ (ಎರಡು) ಚಟ್ನಿ+ ಸಾಂಬಾರ | 20=00 | 30=00 | 50=00 |

ಕುಲಸಚಿವರು ಕುಲಪತಿಗಳು

| | | | | |
|---|---|---|---|---|
| 15 | ಪೂರಿ (ನಾಲ್ಕು) ಬಟಾಟೆ ಪಲ್ಲೆ +ಚಟ್ನಿ | 30=00 | 40=00 | 50=00 |
| 16 | ದೋಸೆ (ಎರಡು) ಕೊಬ್ಬರಿ ಚಟ್ನಿ +ಬಟಾಟೆ ಪಲ್ಲೆ | 30=00 | 40=00 | 50=00 |
| 17 | ಭಜ್ಜಿ (ಆರು) ಒಂದು ಪ್ಲೇಟ್ | 20=00 | 30=00 | 35=00 |
| 18 | ತಂಪು ಪಾನೀಯಗಳು ಒಂದಕ್ಕೆ (ಪೆಪ್ಸಿ, ಕೋಕಾಕೋಲಾ ಮುಂತಾದುವುಗಳು) | 15=00 | Market Rate | 20=00 |

ಮುಂದುವರೆದು, ಸುತ್ತೋಲೆ ಸಂಖ್ಯೆ ಕೆಯು/ಜಿಎಡಿ/ಅತಿಥಿಗೃಹ/2021-22/83, ದಿನಾಂಕ: 17.07.2021 ರ ಅಡಿಯಲ್ಲಿ ಪ್ರಸ್ತುತ ಇದ್ದ ಊಟ/ಉಪಹಾರದ ದರಪಟ್ಟಿಯ ಹಾಗೂ ಕರಾರಿನ ಪ್ರತಿಯನ್ನು ಲಗತ್ತಿಸಿದ್ದು, ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದ ಹೊಸ/ಹಳೆಯ ಅತಿಥಿಗೃಹದ ಭೋಜನಾಲಯದ ಊಟ/ಉಪಹಾರದ ದರಗಳನ್ನು ಪರಿಷ್ಕರಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿ, ಸದ್ಯ ಗುತ್ತಿಗೆದಾರರೇ ಪ್ರಸ್ತುತ ಮಾರುಕಟ್ಟೆ ದರಗಳನ್ನು ಸಲ್ಲಿಸಿರುವುದನ್ನು ಸಿಂಡಿಕೇಟ ಗಮನಿಸಲಾಗಿ, ವಿಶ್ವವಿದ್ಯಾಲಯದಿಂದ ನೇರವಾಗಿ ಸ್ಥಳೀಯ ಮಾರುಕಟ್ಟೆಗಳಲ್ಲಿ ನಮೂಧಿಸಿದಂತಹ ಊಟ/ ಉಪಹಾರಗಳ ದರಗಳನ್ನು ಪಡೆದು ಸದ್ಯ ಇರುವ ದರಗಳನ್ನು ಪರಿಷ್ಕರಣೆಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ನಿರ್ಣಯಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–16: ವಿಷಯ–: ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿಬರುವ ಸಾಂಸ್ಕೃತಿಕ ವಲಯಗಳ **Sub Zonal Office of the South Central Zone at Dharwad, Karnataka State** ಗೆ ಜಮೀನನ್ನು ನೀಡುವ ಬಗ್ಗೆ ಪರಿಶಿಲಿಸುವದು.

ಟಿಪ್ಪಣಿ:

ಮಾನ್ಯ ಕುಲಸಚಿವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇವರಿಗೆ ಸರಕಾರದ ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿ: 29–08–2022ರ ಪತ್ರದಲ್ಲಿ ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಬರುವ ಸಾಂಸ್ಕೃತಿಕ ವಲಯಗಳ **Sub Zonal Office of the South Central Zone at Dharwad, Karnataka State** ಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿರುವ ಸಪ್ತಾಪುರ ಗ್ರಾಮದ ಸ.ನಂ 119/1 ರಲ್ಲಿ 10 ಎಕರೆ ಜಮೀನನ್ನು ಮಂಜೂರಿಸಲು ಸರಕಾರಕ್ಕೆ ಪ್ರಸ್ತಾವಣೆ ಸಲ್ಲಿಕೆಯಾಗಿದ್ದು ನಿಯಮಾನುಸಾರ ಪರಿಶೀಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವಂತೆ ತಿಳಿಸಿದೆ.

The details of the proposal are as follows:

Hon'ble Chief Minister Government of Karnataka Bangalore in his letter dtd; 17/02/2022 addressed to the Hon'ble Union Minister of culture, Government of India New Delhi had stated that to protect,promote and preserve various forms of Folk Art and Culture through out the country, Government of India has created overlapping seven Cultural Zones across the Nation. Each Zone has a Zonal Headquarters, where Zonal Cultural centre has been established.Presently Karnataka state is co-ordinating with South-central Culture Zone at Nagpur, Maharastra.Karnataka has a rich cultural Heritage with diverse linguistic and religious ethnicity.In order to get benefits, to participate and get the permissions required for Cultural Festivals Artists have to depend on Nagpur in Maharastra.

Dharwad has earned the reputation of "Cultural capital of Karnataka." Dharwad region's cultural life blossomed with some of the finest Poets, Writers and thinkers.The city has good connectivity with National Highways and Airport and requested to give necessary direction to the concerned to open a Sub-Zonal office for South central culture Zone at Dharwad, Karnataka.

In reply Hon'ble Minister of culture, tourism and development of North-Eastern Region Government of India New-Delhi, in their letter stated as under;

The matter examined in the ministry and there are certain criteria which are required to be met for setting up of sub centre of ZCCs in their member states. These criteria which have been firmed up at the level of Minister-in-charge, are to be met with.The state government may submit the proposal to the Ministry for the consideration.The criteria for requirement of land is as follows,

**The sub-centre should have enough space for administration block,two auditoriums (1 big and the other small) ,open air theatre for programmes and stage for rehearsals, fire systems, transformer/generator, water tank, rain harvesting system, guard room, parking and green area. In all a land measuring upto 10 Acre is required for a sub-centre**

ಕುಲಸಚಿವರು ಕುಲಪತಿಗಳು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿರುವ ಸಪ್ತಾಪುರ ಗ್ರಾಮದ ಸ.ನಂ 119/1 ರಲ್ಲಿ 10 ಎಕರೆ ಜಮೀನಿನ ಸ್ಥಳವನ್ನು ಪರಿಶೀಲಿಸಿದ್ದು ವಿಶ್ವವಿದ್ಯಾಲಯದ ಆವರಣದ ಮಧ್ಯದಲ್ಲಿ ಇರುತ್ತದೆ. ಈಗ ರಾಷ್ಟ್ರೀಯ ಶಿಕ್ಷಣ ನೀತಿ-2020 **(NEP-2020)** ಜಾರಿಗೆ ಬಂದಿದ್ದು ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯಗಳ ಸ್ವರೂಪಗಳೇ ಬದಲಾಗಲಿರುತ್ತವೆ. ಅಂದರೆ, ಪ್ರತ್ಯೇಕ ಶಿಸ್ತಿನ ವಿಭಾಗಗಳು ಅಂತರ-ಶಿಸ್ತೀಯ ಅಧ್ಯಯನಗಳಕೇಂದ್ರ (MultiDisiciplinaryStudyCenter) ಗಳಾಗಿ ಪರಿವರ್ತನೆಗೊಳ್ಳಲಿರುತ್ತವೆ. ಹಾಗೆಯೇ, ಉನ್ನತಶಿಕ್ಷಣವು ಅಂತರಾಷ್ಟ್ರೀಕರಣ (Internationalization of higer education) ಗೊಳ್ಳಲಿರುತ್ತಿದ್ದು ಕಾನೂನು, ತಾಂತ್ರಿಕ, ಆರೋಗ್ಯ ವಿಷಯಗಳು ಎಲ್ಲಾ ಸಾಮಾನ್ಯ (General) ವಿಶ್ವವಿದ್ಯಾಲಯಗಳಲ್ಲೂ ಕಾಣಿಸಿಕೊಳ್ಳಲಿರುತ್ತವೆ. ವಿದೇಶಿ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವ್ಯವಸ್ಥೆಗಳನ್ನು ಮಾಡಬೇಕಾಗಿರುತ್ತದೆ, ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಸದರಿ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅತ್ಯವಶ್ಯಕವಾಗಿ ಬೇಕಾಗಿರುತ್ತವೆ.

ಈ ಹಿನ್ನಲೇಯಲ್ಲಿ ಪ್ರಸ್ತಾಪಿತ ಜಮೀನಿನ ಹೊರತಾಗಿ ವಿಶ್ವವಿದ್ಯಾಲಯ ಆವರಣದ ಗಡಿ ಭಾಗದಲ್ಲಿ ಅಂದರೆ ಅತ್ತಿಕೊಳ್ಳ ಗ್ರಾಮದ ಸ.ನಂ 81ಅ/1ಸಿ ಅಥವಾ ಮನಸೂರ+ಸಣ್ಣಸೊಮಾಪುರ ಗ್ರಾಮದ ಸ.ನಂ 95ರಲ್ಲಿ ಸುಮಾರು 5(ಐದು) ಎಕರೆ ಜಮೀನನ್ನು ಸದರಿ ಉದ್ದೇಶಕ್ಕೆ ಒದಗಿಸಲು ಪರಿಶೀಸಬಹುದಾಗಿದೆ.

ಇಲ್ಲಿ ನಿವೇದಿಸುವುದೇನೆಂದರೆ ವಿಶ್ವವಿದ್ಯಾಲಯವು ಜಮೀನನ್ನು ಭೂ ಸ್ವಾಧಿನ ಕಾಯ್ದೆ 1894ರನ್ವಯ ಭೂಸ್ವಾಧೀನದ ಮೂಲಕ ಪಡೆಯಲಾಗಿದ್ದು ಭೂ ಸ್ವಾಧೀನ ವೆಚ್ಚ, ಹೆಚ್ಚುವರಿ ಭೂ ಪರಿಹಾರ ಮೊತ್ತವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಕೋಟಿಗಟ್ಟಲೆ ಮೊತ್ತವನ್ನು ಭೂ ಮಾಲಿಕರಿಗೆ ಪಾವತಿಸಿದ್ದು ಇನ್ನೂ ಒಂದೆರಡು ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ಹೆಚ್ಚಿನ ಭೂ ಪರಿಹಾರಕ್ಕಾಗಿ ಬಾಕಿ ಇರುತ್ತವೆ. ಅದರಂತೆ ವಿಶ್ವವಿದ್ಯಾಲಯವು ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೇಂದ್ರಿಯ ವಿದ್ಯಾಲಯ-2 ಸ್ಥಾಪನೆಗೆ ಜಮೀನು ಒದಗಿಸಲು 2020-21ರಲ್ಲಿ ಮಾರ್ಗ ಸೂಚಿ ದರ ಪ್ರತಿ ಎಕರೆಗೆ ರೂ. 2.833 ಕೋಟಿಗಳಾಗುತ್ತಿದ್ದು ಪ್ರತಿ ಎಕರೆಗೆ ಪ್ರತಿವರ್ಷ ಭೂ ಬಾಡಿಗೆ ದರ ರೂ. 19,82,956/-ಗಳೆಂದು ನಿಗದಿಪಡಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇತ್ತೀಚೆಗೆ ಸರಕಾರದಿಂದ ಐದು ಎಕರೆ ಜಮೀನನ್ನು ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೇಂದ್ರಿಯ ವಿದ್ಯಾಲಯ-2 ಸ್ಥಾಪನೆಗೆ ಉಚಿತವಾಗಿ ಒದಗಿಸಲು ಆದೇಶಿಸಿದೆ.

ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆಗೆ ಮಂಡಿಸಲಾಯಿತು.

## ನಿರ್ಣಯ

**ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಬರುವ ಸಾಂಸ್ಕೃತಿಕ ವಲಯಗಳ Sub Zonal Office of the South Central Zone at Dharwad, Karnataka State ಗೆ ಜಮೀನನ್ನು ನೀಡುವ ಬಗ್ಗೆ ಚರ್ಚಿಸಲಾಗಿ ಪ್ರಸ್ತಾಪಿತ ಜಮೀನಿನ ಹೊರತಾಗಿ ವಿಶ್ವವಿದ್ಯಾಲಯ ಆವರಣದ ಗಡಿ ಭಾಗದಲ್ಲಿರುವ ಅತ್ತಿಕೊಳ್ಳ ಗ್ರಾಮದ ಸ.ನಂ 81ಅ/1ಸಿ ಅಥವಾ ಮನಸೂರ+ಸಣ್ಣಸೊಮಾಪುರ ಗ್ರಾಮದ ಸ.ನಂ 95ರಲ್ಲಿ ಸುಮಾರು 5(ಐದು) ಎಕರೆ ಜಮೀನನ್ನು ಸದರಿ ಉದ್ದೇಶಕ್ಕೆ ಒದಗಿಸುವಂತೆ ಕ್ರಮ ಜರುಗಿಸಲು ಸಮಿತಿಯು ಒಮ್ಮತದಿಂದ ನಿರ್ಣಯಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-16: ವಿಷಯ-: ಎಂ.ಪಿ.ಇ ಸೋಸೈಟಿಯ ಎಸ್.ಡಿ.ಎಂ ಮಹಾವಿದ್ಯಾಲಯ, ಹೊನ್ನಾವರ, ಇವರು ಪ್ರವೇಶ ಮಿತಿಗಿಂತ ಎಂ.ಕಾಂ 07 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವ ಕುರಿತು ಮಾನ್ಯ ಉಚ್ಚನ್ಯಾಯಾಲವು ನೀಡಿರುವ ಆದೇಶದ ಅನುಷ್ಠಾನದ ಬಗ್ಗೆ ಪರಿಶೀಲಿಸುವ ಕುರಿತು.

ಟಿಪ್ಪಣಿ:

2015-16ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸುವಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಂ.ಪಿ.ಇ ಸೋಸೈಟಿಯ ಎಸ್.ಡಿ.ಎಂ ಮಹಾವಿದ್ಯಾಲಯ, ಹೊನ್ನಾವರದ ಎಸ್.ಡಿ.ಎಂ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ಎಂ.ಕಾಂ ಕೋರ್ಸಿಗೆ ಈಗಿರುವ 30 ವಿದ್ಯಾರ್ಥಿಗಳ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ 10 ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚುಗೊಳಿಸಲು ಕುಲಸಚಿವರು, ಕ.ವಿ.ವಿ ಪತ್ರದ ಸಂಖ್ಯೆ: ಕವಿವಿ/ಸಿಡಿಸ/ಸಂಯೋಜನೆ/2015-16/1174, ದಿನಾಂಕ: 11.08.2015ರ ಪ್ರಸ್ತಾವನೆ ಮೇರೆಗೆ ಕರ್ನಾಟಕ ಸರಕಾರ, ಉನ್ನತ ಶಿಕ್ಷಣ ಇಲಾಖೆ, ಇವರ ಸರ್ಕಾರ ಆದೇಶ ಸಂಖ್ಯೆ:ಇಡಿ 124 ಯುಕೆವಿ/2015- ಬೆಂಗಳೂರು, ದಿನಾಂಕ: 02.11.2015ರ ಮೂಲಕ ಸರ್ಕಾರವು ಎಂ.ಕಾಂ ಕೋರ್ಸಿಗೆ ಈಗಿರುವ 30 ವಿದ್ಯಾರ್ಥಿಗಳ ಪ್ರಮಾಣಕ್ಕೆ ಹೆಚ್ಚುವರಿಗೆ 10 ವಿದ್ಯಾರ್ಥಿಗಳ ಪ್ರಮಾಣವನ್ನು 2015-16 ನೇ ಶೈಕ್ಷಣಿಕ ಸಾಲಿಗೆ ಅನ್ವಯಿಸಿ ಷರತ್ತುಗಳಿಗೊಳಪಟ್ಟು ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಸದರ ಸರ್ಕಾರದ ಆದೇಶ ಮೇರಗೆ ಸಂಬಂಧಿಸಿದ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿ ವಿದ್ಯಾರ್ಥಿಗಳ ಪ್ರಮಾಣವನ್ನು ಮಂಜೂರಾತಿ ಮಾಡಲು ವಿನಂತಿಸಲಾಗಿ ಕಾಲೇಜು ಅಭಿವೃದ್ಧಿ ಮಂಡಳಿ ಸಂಯೋಜನೆ ವಿಭಾಗದ ಪತ್ರದ ಸಂಖ್ಯೆ: ಕವಿವಿ/ಸಿಡಿಸಿ/ಸಂಯೋಜನೆ/ಸ್ಪೇಶನರಿ /2015-16/2588, ದಿನಾಂಕ: 17.11.2015ರ ಮೂಲಕ ನಿಮ್ಮ ವಿಷಯವನ್ನು ಕೂಲಕುಂಶವಾಗಿ ಪರಿಶೀಲಿಸಿ 2015-16ರ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಅವಧಿ(Term)ಯು ದಿನಾಂಕ: 30.11.2015ಕ್ಕೆ ಕೊನೆಗೊಳ್ಳುತ್ತದೆ. ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಕನಿಷ್ಟ ಹಾಜರಾತಿ ಪೂರೈಸುವುದು ಸಾಧ್ಯವಾಗದ ಪ್ರಯುಕ್ತ ತಮ್ಮ ಮನವಿಯನ್ನು ಈ ಹಂತದಲ್ಲಿ ಪರಿಶೀಲಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಲಾಗಿದೆ. ಆದರೆ ಸದರಿ ಸಂಸ್ಥೆಯವರು ವಿಶ್ವವಿದ್ಯಾಲಯದಲ್ಲಿ ಅನುಮತಿ ಇಲ್ಲದೇ 07 ವಿದ್ಯಾರ್ಥಿಗಳಿಗೆ ಪ್ರವೇಶ ಪಡೆದುಕೊಂಡು ಸಂಸ್ಥೆಯವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರೀಟ್ ಅರ್ಜಿ ಸಂಖ್ಯೆ :113498/2015ರಲ್ಲಿ ದಾಖಲಿಸಿದರು. ಸದರ ನ್ಯಾಯಾಲಯವು ದಿನಾಂಕ: 24.11.2015ರಂದು ಮಧ್ಯಂತರ ಆದೇಶವನ್ನು ಈ ಕೆಳಗಿನಂತೆ ನೀಡಿರುತ್ತದೆ.

**INTERIM PRAYER**

READ : It is prayed to order and direct the respondent No.2 to issue OMR Form and permit the petitioners to appear for the 1st Semester examination for M.Com Course by collecting the examination fees. Till the disposal of the as the court deems fit.

**INTERIM ORDER**

Pending issue of Rule nisi in the aforesaid Writ Petition it is hereby ordered by this Court on Tuesday THE 24th DAY OF November 2015 BY Hon'ble Mr. Justice L.NARAYANA SWAMY that.

Issue notice

Interim prayer granted as prayed. ನೀಡಿದ ಪ್ರಯುಕ್ತ ದಿನಾಂಕ: 08.01.2016ರಂದು ವಿಶ್ವವಿದ್ಯಾಲಯದಿಂದ ಪ್ರತಿನಿಧಿಸಿದ ವಕೀಲರು The Results of the examination taken by these petitioners are held in abeyance ಎಂದು ತಿಳಿಸಿದಂತೆ ಅಂಕಪಟ್ಟಿಗಳನ್ನು ತಡೆಹಿಡಿಯಲಾಗಿದೆ.

ಮಾನ್ಯ ಉಚ್ಚನ್ಯಾಯಾಲಯ, ಧಾರವಾಡ ಬೆಂಚ್‌ದಲ್ಲಿ ದಾಖಲಿಸಿದ ರಿಟ್ ಅರ್ಜಿಯು ಇತ್ಯರ್ಥವಾಗಿ ದಿನಾಂಕ: 03.08.2022ರಂದು ಈ ಕೆಳಗಿನಂತೆ ಆದೇಶ ನೀಡಿರುತ್ತದೆ.

10…... **In view of the above discussion, the writ petition is allowed.**

11. **The impugned order vide Annexure-H is set aside. The University is directed to approve the admissions of the 07 students subject to eligibility of the students.**

12. **Needless to say that if the students are not having requisite attendance, then the respondent-University is at liberty to take action by not permitting the students to appear for the examination for that academic year.**

ಮೇಲ್ಕಂಡ ಮಹಾವಿದ್ಯಾಲಯದ ಪ್ರಕರಣ ಕುರಿತು ಹಾಗೂ ವಿಶ್ವವಿದ್ಯಾಲಯದ ಪತ್ರವನ್ನು ಕಡೆಗಣಿಸಿ 07 ಎಂ.ಕಾಂ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವ ಮತ್ತು ಮಾನ್ಯ ಉಚ್ಚನ್ಯಾಯಾಲಯವು ನೀಡಿದ ಆದೇಶದ ಪ್ರಯುಕ್ತ ಪರಿಶೀಲನೆಗಾಗಿ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಯಿತು.

## ನಿರ್ಣಯ

ಎಂ.ಪಿ.ಇ. ಸೋಸೈಟಿಯ ಎಸ್.ಡಿ.ಎಂ ಮಹಾವಿದ್ಯಾಲಯ, ಹೊನ್ನಾವರ, ಇವರು ಪ್ರವೇಶ ಮಿತಿಗಿಂತ ಎಂ.ಕಾಂ. 07 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವ ಕುರಿತು ಮಾನ್ಯ ಉಚ್ಚನ್ಯಾಯಾಲವು ನೀಡಿರುವ ಆದೇಶದ ಅನುಷ್ಠಾನದ ಬಗ್ಗೆ ಪರಿಶೀಲಿಸಲಾಗಿ ಮಹಾವಿದ್ಯಾಲಯವು ಸರ್ಕಾರದ ಆದೇಶಕ್ಕಿಂತ ಮೊದಲೇ ಹೆಚ್ಚುವರಿಯಾಗಿ 10 ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸಿದಕ್ಕಾಗಿ ಹಾಗೂ ವಿಶ್ವವಿದ್ಯಾಲಯದ ನಿಯಮಗಳ ವಿರುದ್ಧವಾಗಿ 07 ವಿದ್ಯಾರ್ಥಿಗಳ ಪ್ರವೇಶವನ್ನು ಪಡೆದಿದ್ದಕ್ಕಾಗಿ ಮಹಾವಿದ್ಯಾಲಯವು ರೂ.3,00,000/-ಗಳ ದಂಡವನ್ನು ವಿಶ್ವವಿದ್ಯಾಲಯಕ್ಕೆ ಭರಿಸುವಂತೆ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

## ಅಧ್ಯಕ್ಷರ ಅಪ್ಪಣೆ ಮೇರೆಗೆ ಬಂದ ವಿಷಯಗಳು

**ಕಲಂ ಸಂಖ್ಯೆ–17: ವಿಷಯ–: 2022ರಲ್ಲಿ ಜರುಗಿದ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳ ಕಾರ್ಯಕ್ಕೆ ಎಂ. ಎಸ್. ಆಯ್. ಎಲ್. ಬೆಂಗಳೂರು, ಇವರಿಂದ ವಿವಿಧ ನಮೂನೆಯ ಬ್ರೌನ್ ಕವರ್ಸ ಹಾಗೂ ಲೆಡ್ಜರ್ ಪೇಪರ್‌ಗಳನ್ನು ಖರೀದಿಸಿದ್ದರ ಬಿಲ್ಲಿನ ಹಣ ಪಾವತಿ ಮಾಡುವ ವಿಷಯದ ಕುರಿತಾಗಿ ಆಡಳಿತ ಮಂಡಳಿ ಸಮಿತಿ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು.**

ಟಿಪ್ಪಣಿ:

2022ರಲ್ಲಿ ಜರಗುವ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಗಳಿಗೆ ವಿವಿಧ ನಮೂನೆಯ ಬ್ರೌನ್ ಕವರ್‌ಗಳನ್ನು ಹಾಗೂ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ಲೆಡ್ಜರಪೇಪರಗಳನ್ನು ಎಂ.ಎಸ್.ಆಯ್.ಎಲ್ ಬೆಂಗಳೂರು ಇವರಿಂದ ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯ ಒಪ್ಪಿಗೆ ಪಡೆಯಲು ಮಾನ್ಯ ಕುಲಪತಿಗಳ ಆದೇಶಕ್ಕಾಗಿ ಕಡತವನ್ನು ಮಂಡಿಸಲಾಗಿತ್ತು. ಮಾನ್ಯ ಕುಲಪತಿಗಳು ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ಲೆಡ್ಜರ ಪೇಪರ್ಸ ಹಾಗೂ ಬ್ರೌನ್ ಕವರ್‌ಗಳನ್ನು ಎಂ.ಎಸ್.ಆಯ್.ಎಲ್ ಬೆಂಗಳೂರು. ಇವರಿಂದ ಖರೀದಿಸಲು ಆದೇಶಿಸಿರುವರು.

ಪರೀಕ್ಷಾ ವಿಭಾಗಕ್ಕೆ ಅವಶ್ಯವಿರುವ ಲೆಡ್ಜರಪೇಪರ್ಸ ಹಾಗೂ ಬ್ರೌನ್ ಕವರ್‌ಗಳ ಮಾಹಿತಿಯು ಈ ಕೆಳಗಿನಂತಿರುತ್ತದೆ

| Sl.NO | Particular | Indent |
|---|---|---|
| 1 | Dispatch Covers | 80000 |
| 2 | QP Covers | 50000 |
| 3 | Manuscripts Covers | 25000 |
| 4 | Degree Certificate Cover | 35000 |
| 5 | Ledger Papers 15x12x2 (80 GSM) | 80000 |

ಮುಂದುವರೆದು ಸರ್ಕಾರದ ಆರ್ಥಿಕ ಇಲಾಖೆ ಪತ್ರ ಸಂಖ್ಯೆ: ಆಇ/278/ವೆಚ್ಚ–12/2021 ದಿನಾಂಕ:30–04–2021 ರಲ್ಲಿ ಎಂ.ಎಸ್.ಆಯ್.ಎಲ್. ಬೆಂಗಳೂರ ಇವರಿಂದ ನೇರವಾಗಿ ಖರೀದಿಸಲು ನಿರ್ದೇಶನ ನೀಡಿರುತ್ತದೆ.

ಆದ್ದರಿಂದ, 2022ರಲ್ಲಿ ಜರಗುವ ಪರೀಕ್ಷೆಗಳ ಕಾರ್ಯಕ್ಕೆ ಬ್ರೌನ್ ಕವರ್ಸ ಹಾಗೂ ಲೆಡ್ಜರಪೇಪರ್‌ಗಳನ್ನು ತುರ್ತಾಗಿ ಖರಿದಿಸುವುದು ಅವಶ್ಯವಿರುವುದರಿಂದ, ನಿಯಮಾವಳಿಗಳ ಪ್ರಕಾರ ರೂಪಾಯಿ ಒಂದು ಲಕ್ಷ ಗಳಿಗಿಂತ ಹೆಚ್ಚಿಗೆ ಮೊತ್ತದ ಸಾಮಗ್ರಿಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯ ಒಪ್ಪಿಗೆ ಪಡೆಯುವುದು ಅವಶ್ಯವಾಗಿರುತ್ತದೆ. ದಿನಾಂಕ:10/01/2022 ರಂದು ಜರುಗಿದ ದೊಡ್ಡ ಸಮಿತಿ ಸಭೆಯ ನಡುವಳಿ ಈ ಕೆಳಗಿನಂತಿರುತ್ತದೆ.

**"ಪರೀಕ್ಷಾ ವಿಭಾಗಕ್ಕೆ ಫಬ್ರುವರಿ 2022 ರಲ್ಲಿ ಜರುಗುವ ಪರೀಕ್ಷೆಗಳಿಗೆ ಅವಶ್ಯವಿರುವ ವಿವಿಧ ನಮೂನೆಯ ಬ್ರೌನ್ ಕವರ್ಸ್ ಹಾಗೂ ಲೇಡ್ಜರ್ ಪೇಪರ್ಸ್‌ಗಳನ್ನು ಎಂ.ಎಸ್.ಆಯ್.ಎಲ್.ಬೆಂಗಳೂರು ಇವರಿಂದ ಖರೀದಿಸಲು ಸಮಿತಿಯು ಒಮ್ಮತದಿಂದ ಒಪ್ಪಿಗೆ ಸೂಚಿಸಿತು.**

**ಮುಂದುವರೆದು, ಮುಂಬರುವ ಪರೀಕ್ಷೆಗಳಿಗೆ ಅವಶ್ಯವಿರುವಂತಹ ಕವರ್‌ಗಳನ್ನು ಕವಿವಿ ಮುದ್ರಣಲಯದಲ್ಲಯೇ ಮುದ್ರಿಸಲು ಕ್ರಮವಹಿಸಲು ದೊಡ್ಡ ಖರೀದಿ ಸಮಿತಿ ಒಪ್ಪಿಗೆ ಸೂಚಿಸಿತು."**

ಕುಲಸಚಿವರು

ಕುಲಪತಿಗಳು

ದೊಡ್ಡ ಖರೀದಿ ಸಮಿತಿ ಒಪ್ಪಿಗೆ ಸೂಚಿಸಿದ ಪ್ರಕಾರ ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಬ್ರೌನ್ ಕವರ್ಸ ಹಾಗೂ ಲೆಡ್ಜರ ಪೇಪರ್ಸಗಳನ್ನು ಖರೀದಿಸಲಾಗಿದ್ದು, ಸದರ ಸಾಮಗ್ರಿಗಳ ಖರೀದಿಸಿದ್ದರ ಬಿಲ್ಲಿನ ಮೊತ್ತ ರೂ. 10,59,168/–ಗಳನ್ನು ಬಟವಡೆ ಮಾಡುವ ವಿಷಯದ ಕುರಿತಾಗಿ ಆಡಳಿತ ಮಂಡಳಿ ಸಭೆಗೆ ಪರಿಶೀಲನೆಗಾಗಿ ಮಂಡಿಸಿದೆ.

## ನಿರ್ಣಯ

ಫೆಬ್ರುವರಿ–2022ರಲ್ಲಿ ಜರುಗಿದ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳ ಕಾರ್ಯಕ್ಕೆ ಅವಶ್ಯವಾಗಿ ಬೇಕಾದಂತಹ ವಿವಿಧ ನಮೂನೆಯ ಬ್ರೌನ್ ಕವರ್ಸ ಹಾಗೂ ಲೆಡ್ಜರ್ ಪೇಪರ್‌ಗಳನ್ನು ದೊಡ್ಡ ಖರೀದಿ ಸಮಿತಿಯಲ್ಲಿ ಒಪ್ಪಿಗೆ ಸೂಚಿಸಿದಂತೆ ಎಂ.ಎಸ್.ಆಯ್.ಎಲ್. ಬೆಂಗಳೂರು, ಇವರಿಂದ ಖರೀದಿಸಿದ ರೂ.10,59,168/–ಗಳ ಮೊತ್ತದ ಬಿಲ್ಲಿನ ಹಣ ಪಾವತಿ ಮಾಡುವ ವಿಷಯದ ಕುರಿತಾಗಿ ಆಡಳಿತ ಮಂಡಳಿ ಸಮಿತಿ ಸಭೆಯು ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು. ಮುಂದುವರೆದು, ದೊಡ್ಡ ಖರೀದಿ ಸಮಿತಿಗಳಲ್ಲಿ ಸಲ್ಲಿಸಿದಂತಹ ವಿಷಯಗಳನ್ನು ಇನ್ನು ಮುಂದೆ ಆಡಳಿತ ಮಂಡಳಿಯ ಗಮನಕ್ಕೆ ತರಲು ನಿರ್ಣಯಿಸಲಾಯಿತು..

ಕುಲಸಚಿವರು | ಕುಲಪತಿಗಳು